ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Posted at GPO-MBC Post Office 560001,
Posting Day 12th. Reg. No. RNP/BGS/2094/20011-13 Licence to post
RNI No.: KARBILO 2004/18001

# ಸಂಯುಕ್ತ ಸಹಕಾರಿಯ ನಿರ್ದೇಶಕರ ಪರಿಚಯ





## ಸಾಮಾಜಿಕ ಕಾರ್ಯಕರ್ತೆ, ಉತ್ಸಾಹಿ ಮಹಿಳಾ ಸಹಕಾರಿ

### ಶ್ರೀಮತಿ ಹೆಚ್.ಸಿ. ನಾಗರತ್ನ

ಕರ್ನಾಟಕದ ಸಹಕಾರಿ ಚಳುವಳಿಯ ಬೆಳವಣಿಗೆಯಲ್ಲಿ ಮಂಡ್ಯ ಜಿಲ್ಲೆಯ ಸಹಕಾರಿಗಳ ಪಾತ್ರ ಅತ್ಯಂತ ಮಹತ್ವದ್ದು. ಶ್ರೀ.ಕೆ.ವಿ.ಶಂಕರೇಗೌಡ, ಶ್ರೀ ಚೌಡಯ್ಯ, ಶ್ರೀ ಹೆಚ್.ವಿ.ವೀರೆಗೌಡ, ಶ್ರೀ ಲಿಂಗಪ್ಪ, ಶ್ರೀ ಬಿ.ಕೆ.ಪುಟ್ಟಸ್ವಾಮಿ ಹಾಗೂ ಶ್ರೀ ಹೆಚ್.ಬಿ.ಸಿದ್ದಯ್ಯನವರಂಥ ಅನೇಕ ಸಹಕಾರಿ ದಿಗ್ಗಜರನ್ನು ಈ ನಾಡಿಗೆ ಕೊಟ್ಟಿರುವ ಈ ಸಕ್ಕರೆ ಜಿಲ್ಲೆ ಮಂಡ್ಯ ಅನೇಕ ವಿಶಿಷ್ಠ ರೀತಿಯ ಸಹಕಾರಿ ಸಂಘಗಳನ್ನು ಹೊಂದಿದೆ. ಸಂಯುಕ್ತ ಸಹಕಾರಿ ನಿರ್ದೇಶಕಿಯಾಗಿರುವ ಶ್ರೀಮತಿ ಹೆಚ್.ಸಿ.ನಾಗರತ್ನ ಮೂಲತಃ ಮಂಡ್ಯ ಜಿಲ್ಲೆಯ ಹಲ್ಲೆಗೆರೆ. ತಂದೆ ಶ್ರೀ ಚಲುವಪ್ಪ .ಕೃಷಿ ಕುಟುಂಬ. 6 ಜನ ಮಕ್ಕಳಲ್ಲಿ ಇವರು 5 ನೇಯವರು. (ಎಮ್.ಎ.) ಸ್ನಾತಕೋತ್ತರ ಪದವಿ ಶಿಕ್ಷಣ ಮಾಡಿದ ಇವರು ಬೆಂಗಳೂರಿನಲ್ಲಿ ಬ್ಯಾಂಕೊಂದರಲ್ಲಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಕೃಷ್ಣ ಇವರೊಂದಿಗೆ ವಿವಾಹವಾಗಿ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ.

ಸಮಾಜದ ಸೇವೆಗೆ ಪ್ರಥಮ ಆದ್ಯತೆ ನೀಡುವ ಇವರು ಪ್ರಸಕ್ತ 90,000 ಮಕ್ಕಳಿಗೆ ಬಿಸಿಯೂಟ ಒದಗಿಸುವ "ಅದಮ್ಯ ಚೇತನ" ವೆಂಬ ಸಂಸ್ಥೆಯ ಕ್ರೀಯಾಶೀಲ ಕಾರ್ಯಕರ್ತೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

"ತಾಯಿಮನೆ" ಎಂಬ ಟ್ರಸ್ಟಿನಲ್ಲಿರುವ 35 ಅನಾಥ ಮಕ್ಕಳ ಊಟ ವಸತಿ ಶಿಕ್ಷಣ ಮತ್ತು ಸರ್ವಾಂಗೀಣ ಪ್ರಗತಿಯ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ.

ಆಟಪಾಟ ಎಂಬ ಯೋಜನೆಯಡಿಯಲ್ಲಿ ಸರಕಾರಿ ಶಾಲೆಯ ಮಕ್ಕಳಿಗೆ ಕನ್ನಡ ಪಾಠ ಹೇಳಿಕೊಡುವ ಹವ್ಯಾಸಿ ಶಿಕ್ಷಕಿಯಾಗಿದ್ದಾರೆ.

ಸಾಮಾಜಿಕ ಕಳಕಳಿಯನ್ನು ಹಾಗೂ ಸಹಕಾರಿ ಮನೋಭಾವವನ್ನು ರಕ್ತಗತವಾಗಿ ರೂಢಿಸಿಕೊಂಡವರು. ಸಮಾಜದ ಅನಿಷ್ಟಗಳನ್ನು ದೂರವಿರಿಸಲು, ಸಮಾಜದ ಎಲ್ಲ ವರ್ಗದ ಜನರ ಆರ್ಥಿಕ,ಸಾಮಾಜಿಕ ಅಭಿವೃದ್ಧಿಗೆ ಶ್ರಮಿಸುವ ಹೋರಾಟದ ಸ್ವಭಾವದವರು.

ಸಹಕಾರಿ ಕ್ಷೇತ್ರದಲ್ಲಿ ಬೆಂಗಳೂರಿನ ಗ್ರೇನ ಮರ್ಚೆಂಟ್ಸ ಸಹಕಾರ ಬ್ಯಾಂಕಿನ ಸದಸ್ಯತ್ವ ಹೊಂದಿರುವ ಇವರು ಸಹಕಾರ ಕ್ಷೇತ್ರದಿಂದ ಸಾಮಾನ್ಯ ಜನರಿಗೆ ಸಾಕಷ್ಟು ಸೇವೆ ಮಾಡಬಹುದಾಗಿದೆ. ಇದರಲ್ಲಿ ಅನೇಕ ಅಧ್ಯಯನ ಯೋಗ್ಯ ವಿಷಯಗಳಿವೆ. ಬೃಹದಾಕಾರವಾಗಿ ಬೆಳೆದಿರುವ ಸಾಮಾನ್ಯ ಜನರಿಗೆ ಸಹಕಾರಿ ಕ್ಷೇತ್ರದ ಸಾಧನೆಗಳ ಅರಿವಿಲ್ಲ.ಸಹಕಾರಿ ಕ್ಷೆತ್ರದ ಬಗ್ಗೆ ಸಮಾಜದಲ್ಲಿ ಸಕಾರಾತ್ಮಕ ಮನೋಭಾವ ರೂಢಿಸುವ ಅಗತ್ಯತೆ ಇದೆ. ಸಹಕಾರಿ ಕ್ಷೇತ್ರದ ಅಪಾರ ಚಟುವಟಿಕೆಗಳ ಮಾಹಿತಿ ಒದಗಿಸುವ ಕೆಲಸ ನಡೆಯಬೇಕಿದೆ. ಮಹಿಳೆಯರು ಹಾಗೂ ಯುವಕರಲ್ಲಿ ಈ ಬಗ್ಗೆ ಪ್ರಜ್ಞೆ ಮೂಡಿಸಿ ಸಹಕಾರದ ಬಗ್ಗೆ ಒಲವು ಮೂಡಿಸಿ ಅವರು ಈ ಕ್ಷೇತ್ರದ ಪ್ರಯೋಜನ ಪಡೆಯುವಂತಾಗಬೇಕಿದೆ ಎಂದು ಅಭಿಪ್ರಾಯ ಪಡುತ್ತಾರೆ.

ಇತ್ತೀಚೆಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಚುನಾವಣೆ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಬೆಂಗಳೂರು ಜಿಲ್ಲಾ ಪ್ರತಿನಿಧಿಯಾಗಿ ಆಯ್ಕೆಯಾಗಿದ್ದಾರೆ. ಸಂಯುಕ್ತ ಸಹಕಾರಿಯ ಎಲ್ಲ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ತೊಡಗಿಸಿಕೊಳ್ಳುತ್ತಾರೆ.




## ಪತ್ರಿಕೆಯ ಬಗ್ಗೆ ಅನಿಸಿಕೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ,ಬೆಂಗಳೂರು ಇವರಿಂದ ಪ್ರಕಟವಾಗುತ್ತಿರುವ 'ಸ್ವಾಭಿಮಾನಿ ಸಹಕಾರಿ' ಯು ಉತ್ತಮವಾದ ಮಾಹಿತಿಯನ್ನೊಳಗೊಂಡು, ಪ್ರತಿ ಸೌಹಾರ್ದ ಸಹಕಾರಿಗೆ ಮಾರ್ಗದರ್ಶಿಕೆಯಾಗಿ ಮೂಡಿಬರುತ್ತಿದೆ. ಪ್ರತಿ ಸಂಚಿಕೆಯೂ ವೈವಿಧ್ಯಮಯವಾದ ವಿಷಯಗಳನ್ನು ಓದುಗರಿಗೆ ತಿಳಿಸುತ್ತ ಬಂದಿದೆ. ಈ ಕ್ಷೇತ್ರದ ಪ್ರತಿಯೊಬ್ಬರ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಲೇಖನಗಳು ನಿಜಕ್ಕೂ ಸಂಗ್ರಹ ಯೋಗ್ಯವಾಗಿದೆ. ಇಂತಹ ಗುಣಮಟ್ಟದ ಪತ್ರಿಕೆಯನ್ನು ಹೊರತರುತ್ತಿರುವ ತಮ್ಮೆಲ್ಲರಿಗೂ ನನ್ನ ಅಭಿನಂದನೆಗಳು.

**ಶ್ರೀ ಬಿ.ಎ.ಮಹದೇವಪ್ಪ,** ಸಹಕಾರ ಸಂಘಗಳ ಜಂಟಿ ನಿಬಂಧಕರು, ನಿರ್ದೇಶಕರು ಮೈಕ್ರೊ ಫೈನಾನ್ಸ್ ವಿಭಾಗ ಅಪೆಕ್ಸ್ ಬ್ಯಾಂಕ್, ಬೆಂಗಳೂರು.

**ಸೂಚನೆ :** (ಈ ಪತ್ರಿಕೆಯ ಬಗ್ಗೆ ಓದುಗರು ತಮ್ಮ ಅಭಿಪ್ರಾಯವನ್ನು ಕಳುಹಿಸಿದಲ್ಲಿ ಸದರಿ ಅನಿಸಿಕೆಗಳನ್ನು ಮುಂಬರುವ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು.)

### ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತಿಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಜಿ. ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ತರಬೇತಿ ಅಧಿಕಾರಿ | ಶ್ರೀ ವಿ.ಜೆ. ಕಾರಕೂನ | 9482734077 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜಿ.ಎಸ್. ಟೋಪಣ್ಣನವರ್ | 9916367887 |

ಬೆಳಗಾವಿ ವಿಭಾಗೀಯ ಕಛೇರಿಯ ವಿಳಾಸ : ನಂ.436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ – 1. ದೂ. 0831–2401551

ಇವರಿಂದ ಪ್ರಕಟಿತ :

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ,
(ವಿವೇಕಾನಂದ ಕಾಲೇಜು ಎದುರು)
ಒಂದನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು – 560010.

**ದೂರವಾಣಿ ಸಂಖ್ಯೆಗಳು :**
23378375/76/77/78/79/80 ಹಾಗೂ 23474408, 23573291

ಸಂಪಾದಕ, ಪ್ರಕಾಶಕ: **ಶರಣಗೌಡ ಜಿ. ಪಾಟೀಲ,**
ಸಂಚಿಕೆ ಸಿದ್ಧತೆ **ವಿ.ಜೆ.ಕಾರಕೂನ**
ಮುದ್ರಣ : ವರ್ಣ ಕಮ್ಯುನಿಕೇಷನ್ಸ್, ಬೆಂಗಳೂರು.

ದಶಮಾನೋತ್ಸವ ವರ್ಷ

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸಂಪುಟ 8 * ಸಂಚಿಕೆ 8 * ಆಗಸ್ಟ್ 2011 * ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ * ವಾರ್ಷಿಕ ಚಂದಾ 50/– * ಬೆಲೆ ₹ 5

## ಅನುಭವಿ ಸಹಕಾರಿ ರಾಜ್ಯದ ನೂತನ ಮುಖ್ಯಮಂತ್ರಿ ಶ್ರೀ ಡಿ.ವಿ.ಸದಾನಂದಗೌಡ



ಕರ್ನಾಟಕ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಶ್ರೀ ಸದಾನಂದಗೌಡ ಅವರು ರಾಜ್ಯಪಾಲರಾದ ಶ್ರೀ ಹಂಸರಾಜ್ ಭಾರದ್ವಾಜ್ ಅವರಿಂದ ಪ್ರಮಾಣ ವಚನ ಸ್ವೀಕರಿಸಿದರು.

## 64ನೇ ಸ್ವಾತಂತ್ರ್ಯೋತ್ಸವ





ಎಸ್.ಆರ್. ಸತೀಶ್ ಚಂದ್ರ
ಅಧ್ಯಕ್ಷರು

ಕರ್ನಾಟಕ ರಾಜ್ಯದ ನೂತನ
ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿರುವ
**ಶ್ರೀ ಡಿ.ವಿ. ಸದಾನಂದಗೌಡ ಅವರಿಗೆ**
ಸಂಯುಕ್ತ ಸಹಕಾರಿಯ ಅಧ್ಯಕ್ಷರು,
ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿಯ
ಹಾರ್ದಿಕ ಶುಭಾಶಯಗಳು



ಗುರುನಾಥ ಜ್ಯಾಂತೀಕರ
ಉಪಾಧ್ಯಕ್ಷರು

**ಒಳಪುಟಗಳಲ್ಲಿ...**

ಅಧ್ಯಕ್ಷರ ನುಡಿ ....2
ಸೌಹಾರ್ದ ಸಹಕಾರಿಗಳ ಸಮಾಚಾರಗಳು ....3,4,5,6
ಲೇಖನ ....7
ತರಬೇತಿ ಕಾರ್ಯಕ್ರಮ ....8,9
ಶಿಕ್ಷಣ ನಿಧಿಗೆ ಕೊಡುಗೆ ....10
ಲೇಖನ ....11,12,13,14,15
ನಿರ್ದೇಶಕರ ಪರಿಚಯ ....16

ಸೌಹಾರ್ದ ಸಹಕಾರಿಗಳ ಸಂಖ್ಯೆ : 1727 – 'ಇ' ಸ್ಟಾಪಿಂಗ್ ಕೇಂದ್ರಗಳ ಸಂಖ್ಯೆ – 376

# ವಾರ್ಷಿಕ ಸಾಮಾನ್ಯ ಸಭೆಗಳು ಉತ್ತಮ ಗುಣಮಟ್ಟದ್ದಾಗಿರಲಿ



"ನಮ್ಮ ದೇಶ ಪ್ರಪಂಚದ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವೆಂದು ಹೆಸರುವಾಸಿಯಾಗಿರುವಂತೆ ಸಹಕಾರ ಕ್ಷೇತ್ರದಲ್ಲೂ ಒಳ್ಳೆಯ ಹೆಸರು ಮಾಡಿದ ರಾಷ್ಟ್ರ. ನಮ್ಮ ದೇಶದ ಸಹಕಾರಿ ಕ್ಷೇತ್ರದ ಸಾಧನೆಯನ್ನು ಗಮನಿಸಿದ ಅಮೇರಿಕ 2012 ವರ್ಷವನ್ನು ಸಹಕಾರಿ ವರ್ಷವೆಂದು ಘೋಷಿಸಿದೆ. ನಮ್ಮ ದೆಶದ ಸಹಕಾರ ಚಳುವಳಿಯ ಸಾಧನೆಗೆ ಜಗತ್ತಿನ ಸಹಕಾರಿಗಳು ಅಧ್ಯಯನ ಮಾಡುತಿದ್ದಾರೆ. ನಾವೆಲ್ಲ ಹೆಮ್ಮೆ ಪಡುವಂತಾಗಿದೆ."

**ಸ**ಹಕಾರಿ ಬಂಧುಗಳೆಲ್ಲರಿಗೂ 65ನೇ ಸ್ವಾತಂತ್ರೋತ್ಸವದ ಶುಭಾಶಯಗಳು. ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಗೆ ಹಾಗೂ ರಾಷ್ಟ್ರದ ಐಕ್ಯತೆಗೆ ಎಲ್ಲರೂ ಒಟ್ಟಾಗಿ ಶ್ರಮಿಸೋಣ. ಒಟ್ಟಾಗಿ ದುಡಿಯೋಣ. ಒಟ್ಟಾಗಿ ಪ್ರಗತಿ ಸಾಧಿಸೋಣ. ನಮ್ಮದು ಪ್ರಪಂಚದಲ್ಲಿ ಮುಂದುವರೆಯುತ್ತಿರುವ ರಾಷ್ಟ್ರವಲ್ಲ. ಈಗಾಗಲೆ ಮುಂದುವರೆದ ರಾಷ್ಟ್ರವೆಂದು ಅಮೇರಿಕದ ಅಧ್ಯಕ್ಷ ಶ್ರೀ ಒಬಾಮಾರವರ ಹೇಳಿಕೆಯಂತೆ ನಾವುಗಳು ಎಲ್ಲ ರಂಗದಲ್ಲೂ ಅದನ್ನು ಸಾಬೀತುಪಡಿಸುವಲ್ಲಿ ಪಣತೊಟ್ಟು ಕಾರ್ಯನಿರ್ವಹಿಸಿ ಮುಂದೆ ಸಾಗೋಣ

ನಮ್ಮ ದೇಶ ಪ್ರಪಂಚದ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವೆಂದು ಹೆಸರುವಾಸಿಯಾಗಿರುವಂತೆ ಸಹಕಾರ ಕ್ಷೇತ್ರದಲ್ಲೂ ಒಳ್ಳೆಯ ಹೆಸರು ಮಾಡಿದ ರಾಷ್ಟ್ರ. ನಮ್ಮ ದೇಶದ ಸಹಕಾರಿ ಕ್ಷೇತ್ರದ ಸಾಧನೆಯನ್ನು ಗಮನಿಸಿದ ಅಮೇರಿಕ 2012 ವರ್ಷವನ್ನು ಸಹಕಾರಿ ವರ್ಷವೆಂದು ಘೋಷಿಸಿದೆ. ನಮ್ಮ ದೇಶದ ಸಹಕಾರ ಚಳುವಳಿಯ ಸಾಧನೆಯನ್ನು ಜಗತ್ತಿನ ಸಹಕಾರಿಗಳು ಅಧ್ಯಯನ ಮಾಡುತಿದ್ದಾರೆ. ನಾವೆಲ್ಲ ಹೆಮ್ಮೆ ಪಡುವಂತಾಗಿದೆ.

ಈ ಬೃಹತ್ ಸಹಕಾರ ಚಳುವಳಿಯ ವಾರ್ಷಿಕ ಹಬ್ಬವೆಂದರೆ ವಾರ್ಷಿಕ ಸರ್ವಸದಸ್ಯರ ಸಭೆ ಅಥವಾ ಸಾಮಾನ್ಯ ಸಭೆ. ಪ್ರತಿಯೊಬ್ಬ ಸದಸ್ಯರಿಗೂ ತಮ್ಮ ಸಂಸ್ಥೆಯ ಅಭಿವೃದ್ಧಿಯನ್ನು ತಿಳಿದುಕೊಳ್ಳುವ ಹಾಗೂ ಸಂಸ್ಥೆಯ ಕಾರ್ಯ ಚಟುವಟಿಕೆಗಳ ಅಧ್ಯಯನ ಮಾಡುವ ಸದವಕಾಶ.

ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಾಗಲಿ ಅಥವಾ 1959ರ ಕಾಯ್ದೆಯಡಿಯಲ್ಲಾಗಿ ಸಾಮಾನ್ಯ ಸಭೆಗಳು ಸೆಪ್ಟೆಂಬರ್ 30ರ ಒಳಗಾಗಿ ನಡೆಯಲೇಬೇಕು. ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಈ ಸಾಮಾನ್ಯ ಸಭೆಯನ್ನು ಯಾವುದೇ ಕಾರಣಕ್ಕೂ ಮುಂದೂಡಲು ಅವಕಾಶವಿಲ್ಲ. ಅವಧಿಯನ್ನು ವಿಸ್ತರಿಸಿ ಅನುಮತಿಸುವ ಅಧಿಕಾರ ಯಾರಿಗೂ ಇರುವುದಿಲ್ಲ. ಆದರೆ ಹಳೆಯ 1959ರ ಕಾಯ್ದೆಯಡಿಯಲ್ಲಿ ಕೆಲವು ವಿಶೇಷ ಸಂದರ್ಭಗಳಲ್ಲಿ ಸಾಮಾನ್ಯ ಸಭೆಯನ್ನು ಮುಂದೂಡುವ ಅಥವಾ ಅವಧಿ ವಿಸ್ತರಿಸುವ ಅಧಿಕಾರ ಮಾನ್ಯ ನಿಬಂಧಕರಿಗೆ ಹಾಗೂ ಸರಕಾರಕ್ಕೆ ಇರುತ್ತದೆ.

ಹಾಗಾಗಿ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಸೌಹಾರ್ದ ಸಹಕಾರಿಗಳು ಸೆಪ್ಟೆಂಬರ 30ರ ಒಳಗಾಗಿ ವ್ಹಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲೇಬೇಕು. ಸಹಕಾರಿ ಹೊಸದಾಗಿರಲಿ ಅಥವಾ ಈಗಾಗಲೇ ಹಲವು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಸಹಕಾರಿಯಾಗಲಿ ಯಾರೂ ಸಹ ಈ ಸಭೆಯನ್ನು ನಡೆಸದಿರಲಿಕ್ಕೆ ಅಥವಾ ಮುಂದೂಡಲಿಕ್ಕೆ ಅವಕಾಶವಿಲ್ಲ. ಈ ಸಭೆಯಲ್ಲಿ ಸೌಹಾರ್ದ ಸಹಕಾರಿಯ ಕಳೆದ ವರ್ಷದ ಚಟುವಟಿಕೆಗಳ ವರದಿಯನ್ನು, ಲೆಕ್ಕಪತ್ರಗಳನ್ನು ಅವಲೋಕನೆ ಮಾಡಿ ಮುಂಬರುವ ವರ್ಷದ ಕಾರ್ಯಕ್ರಮಗಳನ್ನು ಆಯವ್ಯಯಗಳನ್ನು ಅಗತ್ಯವಿದ್ದಲ್ಲಿ ಉಪವಿಧಿಗಳ ತಿದ್ದುಪಡಿಗಳನ್ನು ಅನುಮೋದಿಸಬೇಕಾಗುತ್ತದೆ. ಈ ಸಭೆ ಸೌಹಾರ್ದ ಸಹಕಾರಿಯ ಅತ್ಯಂತ ಮಹತ್ವದ ಸಭೆಯಾಗಬೇಕು. ಎಲ್ಲ ಸದಸ್ಯರ ಭಾಗವಹಿಸುವಿಕೆಗೆ ಅವಕಾಶವಾಗಿ ಉತ್ತಮ ನಿರ್ಣಯಗಳನ್ನು ತೆಗೆದುಕೊಳ್ಳುವ ವೇದಿಕೆಯಾಗಿ ಕಾರ್ಯನಿರ್ವಹಿಸಬೇಕು. ಸಭೆಯಲ್ಲಿ ಸದಸ್ಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಅವಶ್ಯವಾಗುವ ವಿಷಯಗಳ ಬಗ್ಗೆ ಚರ್ಚೆಯಾಗಬೇಕು. ಸಭೆಯ ಗುಣಮಟ್ಟ ಉತ್ತಮವಾಗಿರಬೇಕು. ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯ ಪ್ರತೀಕವಾಗಿರಬೇಕು. ಮಾದರಿಯಾಗಬೇಕು. ಸಾರ್ವಜನಿಕರು ಸರಕಾರ ಅಪೇಕ್ಷಿಸುವ ಹಾಗೆ ಸೌಹಾರ್ದ ಸಹಕಾರಿಯ ಪ್ರಗತಿಗೆ ಪೂರಕವಾಬೇಕು. ಈ ಬಗ್ಗೆ ಹೆಚ್ಚಿನ ವಿವರ ಅಥವಾ ಮಾಹಿತಿ ಅವಶ್ಯವೆನಿಸಿದರೆ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಬಹುದಾಗಿದೆ.

– ಎಸ್.ಆರ್. ಸತೀಶಚಂದ್ರ

ಖರೀದಿಗೆ ಉಪಯೋಗಿಸಬಾರದು. ಸ್ಥಿರಾಸ್ತಿ ಖರೀದಿಗೆ ಕಾನೂನು ಪ್ರಕಾರ ಕಾಯ್ದಿಟ್ಟ ನಿಧಿಯ ಕೆಲವು ಭಾಗವನ್ನು ಉಪಯೋಗಿಸಬಹುದಾಗಿದೆ. ಯಾವುದೇ ಸ್ಥಿರಾಸ್ತಿ ಖರೀದಿ ಮತ್ತು ಮಾರಾಟ ಮಾಡುವಾಗ ಸದರಿ ಆಸ್ತಿಯ ಪೇಟೆಯ ನಿಖರವಾದ ಬೆಲೆಯನ್ನು ಮಾರುಕಟ್ಟೆಯಿಂದ ಪಡೆದು ಹಾಗೂ ಸರಕಾರವು ಸಮ್ಮತಿಸಲ್ಪಟ್ಟ ವ್ಯಾಲುಯರ (Govt. Approved Valuer) ಇವರಿಂದ ಸ್ಥಿರಾಸ್ತಿಯ ಬೆಲೆಯನ್ನು ತಿಳಿದುಕೊಳ್ಳಬೇಕು ಅದಲ್ಲದೆ ಆಸ್ತಿಯ ಖರೀದಿ ವೇಳೆಗೆ ಆಸ್ತಿಯ ಬಗ್ಗೆ (Title to Property by the Owner & Competancy of the Seller to sell the Property) ಸ್ಥಿರಾಸ್ತಿ ಮಾರಾಟ ಮಾಡುವವರು ಹೊಂದಿದ ಕಾನೂನಬದ್ಧ ಮಾಲಿಕತ್ವ ಹಾಗೂ ಮಾರಾಟಗಾರರು ಸದರಿ ಆಸ್ತಿಯನ್ನು ಮಾರಾಟಮಾಡಲು ಅವರಿಗೆ ಇರುವ ಕಾನೂನುಬದ್ಧ ಅಧಿಕಾರ ಹಾಗೂ ಅರ್ಹತೆಗಳನ್ನು ಅರಿತುಕೊಳ್ಳಲು ಅದಲ್ಲದೆ ಸಹಕಾರಿಯು ಸದರಿ ಆಸ್ತಿ ಖರೀದಿಯಲ್ಲಿ ಸರಿಯಾದ ಹಾಗೂ ಕಾನೂನುಬದ್ಧ ಮಾಲಿಕತ್ವವನ್ನು ಪಡೆಯುವ ಬಗ್ಗೆ ತಿಳಿದುಕೊಳ್ಳಲು ಕಾನೂನು ಸಲಹೆಗಾರರಿಂದ ಅಭಿಪ್ರಾಯವನ್ನು ಪಡೆಯಬೇಕು ಆಸ್ತಿಯನ್ನು ಖರೀದಿಸುವ ಮುಂಚೆ ಸ್ಥಿರಾಸ್ತಿಯ ಖರೀದಿ ಬಗ್ಗೆ ಸಾರ್ವಜನಿಕರಿಗೆ ಗೊತ್ತುಪಡಿಸುವ ಹಾಗೂ ಸದರಿ ವ್ಯವಹಾರದಲ್ಲಿ ಯಾರದಾದರೂ ತಕರಾರು ವಗೈರೆ ಇದ್ದಲ್ಲಿ ಅವರಿಂದ ತಿಳಿದುಕೊಳ್ಳಲು ಸಹಕಾರಿಯ ಕ್ಷೇತ್ರದಲ್ಲಿ ಹೆಚ್ಚಿಗೆ ಪ್ರಸಾರವುಳ್ಳ ದಿನಪತ್ರಿಕೆಯಲ್ಲಿ ಜಾಹೀರ ನೋಟೀಸನ್ನು ಸಹಕಾರಿಯು ಪ್ರಕಟಿಸಬೇಕು. ಮಾರಾಟಗಾರರು ಮಾರಾಟ ಮಾಡುವ ಆಸ್ತಿ ವಿಷಯದಲ್ಲಿ ಯಾರದಾದರು ತಕರಾರು ಇಲ್ಲದಿದ್ದಲ್ಲಿ ಹಾಗೂ ಕಾಯ್ದೆ ಸಲಹೆಗಾರರ ಅಭಿಪ್ರಾಯದಲ್ಲಿ ಆಸ್ತಿ ಖರೀದಿಗೆ ಯವುದೇ ಅಭ್ಯಂತರ ಇಲ್ಲದಿದ್ದಲ್ಲಿ ಸಹಕಾರಿಯ ಆಸ್ತಿಯನ್ನು ತನ್ನ ಇತಿಮಿತಿಯೊಳಗೆ ಖರೀದಿಸಬಹುದಾಗಿದೆ. ಸಹಕಾರಿಯು ತನ್ನ ವ್ಯವಹಾರಕ್ಕೆ ಹಾಗೂ ಕಛೇರಿಗೆ ಆವಶ್ಯವಿದ್ದಷ್ಟು ಸ್ಥಿರಾಸ್ತಿಯನ್ನು ಖರೀದಿ ಮಾಡಬಹುದಾಗಿದೆ. ಸಹಕಾರಿಯು ಸ್ಥಿರಾಸ್ತಿಯನ್ನು ಮಾರಾಟ ಮಾಡುವಾಗ ಅದರ ಪೇಟೆ ಬೆಲೆಯನ್ನು ಪಡೆಯುವದಲ್ಲದೆ ಸರ್ಕಾರವು ಸಮ್ಮತಿಸಲ್ಪಟ್ಟ ವ್ಯಾಲುಯರ (Govt. Approved Valuer) ಇವರಿಂದ ಸ್ಥಿರಾಸ್ತಿಯ ಬೆಲೆಯನ್ನು ತಿಳಿದುಕೊಳ್ಳಬೇಕು ಹಾಗೂ ಮಾರಾಟಕ್ಕಿಂತ ಮುಂಚೆ ಸಹಕಾರಿಯ ಕ್ಷೇತ್ರದಲ್ಲಿ ಹೆಚ್ಚಿಗೆ ಪ್ರಸಾರವುಳ್ಳ ದಿನಪತ್ರಿಕೆಯಲ್ಲಿ ಆಸ್ತಿ ಮಾರಾಟ ಸಲುವಾಗಿ ಖರೀದಿದಾರರನ್ನು ಅಹ್ವಾನಿಸುವ ಟೆಂಡರ ನೋಟಿಸ (Notice inviting Tenders from Purchasers of Immovable Property)ವನ್ನು ಪ್ರಕಟಿಸಬೇಕು. ಎಲ್ಲ ಮೂಲಗಳಿಂದ ಆಸ್ತಿಯ ಮಾರಾಟದಲ್ಲಿ ಹೆಚ್ಚಿನ ಬೆಲೆಯನ್ನು ದೊರಕಿಸಲು ಪ್ರಯತ್ನಿಸಬೇಕು. ಕಛೇರಿಗೂ ಹಾಗೂ ವ್ಯವಹಾರಕ್ಕೆ ಅವಶ್ಯವಿದ್ದ ಯಾವದೇ ಆಸ್ತಿಯನ್ನು ಅನಾವಶ್ಯಕವಾಗಿ ಮಾರಾಟ ಮಾಡಬಾರದು. ಸಹಕಾರಿಯು ಯಾವುದೇ ಸ್ಥಿರಾಸ್ತಿಯ ಖರೀದಿ ಹಾಗೂ ಮಾರಾಟ ಮಾಡುವ ಮುಂಚೆ ಸರ್ವಸಾಮಾನ್ಯ ಸಭೆಯಲ್ಲಿ ಇದರ ಸಲುವಾಗಿ ಮಂಜೂರಿ ಪಡೆಯಬೇಕು. ಈ ಮೇಲೆ ಬರೆದ ಅಂಶಗಳ ವ್ಯತಿರಿಕ್ತ ಸಹಕಾರಿಯ ನಿರ್ದೇಶಕ ಮಂಡಳಿಯು ಯಾವುದೆ ಖರೀದಿ ಮತ್ತು ಮಾರಾಟ ವ್ಯವಹಾರಗಳನ್ನು ಮಾಡಿದಲ್ಲಿ ಅಂತಹ ವ್ಯವಹಾರಗಳಲ್ಲಿ ಆದ ನಷ್ಟ ಹಾಗೂ ಆಗು ಹೋಗುಗಳಿಗೆ ನಿರ್ದೇಶಕ ಮಂಡಳಿಯ ಸದಸ್ಯರು ಸಹಕಾರಿ ಸಮಾನ್ಯ ಸಭೆಗೆ ನೇರವಾಗಿ ಜವಾಬ್ದಾರಿ ಆಗುತಾರೆ ಸಂಯುಕ್ತ ಸಹಕಾರಿಗಳ ಆಸ್ತಿ ಖರೀದಿ ಮತ್ತು ಮಾರಾಟ ವಿಷಯಗಳಲ್ಲಿ ಮೇಲಿಂದ ಮೇಲೆ ಹೊರಡಿಸುವ ಪರಿಪತ್ರಗಳು ಸಹಕಾರಿಗಳಿಗೆ ಅನ್ವಯಿಸುತ್ತವೆ ಹಾಗೂ ಬಂಧನಕಾರಕ ಇರುತ್ತವೆ.

24. ನಿರ್ದೇಶಕ ಮಂಡಳಿಯ ಸದಸ್ಯರು ಯಾವುದೇ ಕಾಲಕ್ಕೆ ತಮ್ಮ ಹಾಗೂ ತಮ್ಮ ಸಂಬಂಧಿಕರ ಸಾಲ ವ್ಯವಹಾರಗಳು ಸುಸ್ಥಿ ಬಾಕಿಯಾಗದಂತೆ ಮತ್ತು ತಮ್ಮ ತಮ್ಮ ಸಾಲಗಳ ಮೇಲಿನ ಕಂತುಗಳನ್ನು ಹಾಗೂ ಬಡ್ಡಿಗಳನ್ನು ಸರಿಯಾದ ಸಮಯದಲ್ಲಿ ಹಾಗೂ ಸರಿಯಾಗಿ ತುಂಬುವ ಬಗ್ಗೆ ಜಾಗರೂಕತೆಯಿಂದ ನಡೆದುಕೊಳ್ಳಬೇಕು.

25. ಗ್ರಾಹಕರ ಹಾಗೂ ಸದಸ್ಯರ ಸಹಕಾರಿಯ ಬಂಧು ಬಾಂಧವ್ಯಗಳನ್ನು ಬೆಳೆಸಲು ಸಹಕಾರಿಯು ವರ್ಷಕ್ಕೊಮ್ಮೆ ಸಹಕಾರಿಯ ಹುಟ್ಟು ಹಬ್ಬದ ದಿನಾಚರಣೆ, ಠೇವುದಾರರ ಸಪ್ತಾಹ ಹಾಗೂ ಸದಸ್ಯನ ಮಕ್ಕಳಿಗೆ ಪರೀಕ್ಷೆಗಳಲ್ಲಿ ಉತ್ತಮ ಗುಣ ಪಡೆದಿದ್ದಕ್ಕೆ ಪಾರಿತೋಷಕ ಬಹುಮಾನ ಕೊಡುವುದು, ಇಂತಹ ಯೋಜನೆಯ ಸಮಾರಂಭಗಳನ್ನು ಜರುಗಿಸಬೇಕು. ಇದರಿಂದಾಗಿ ಸಾರ್ವಜನಿಕರ ಸಂಪರ್ಕಗಳು ಹೆಚ್ಚಾಗಿ ವ್ಯವಹಾರಗಳು ಬೆಳೆಯುತ್ತವೆ.

26. ಸಹಕಾರಿಯು ತನ್ನ ದುಡಿಯುವ ಬಂಡವಾಳದ ಮೇಲೆ ಕನಿಷ್ಠ 2 ಪ್ರತಿಶತದಷ್ಟಾದರು ನಿವ್ವಳ ಲಾಭ ಗಳಿಸಬೇಕು. ಆಡಳಿತ ಖರ್ಚು ದುಡಿಯುವ ಬಂಡವಾಳಕ್ಕೆ 2.50 ಪ್ರತಿಶತಕ್ಕೆ ಮಿಕ್ಕಬಾರದು. ಠೇವು ಹಾಗೂ ಸಾಲಗಳ ಮೇಲೆ ಆಕರಿಸುವ ಸರಾಸರಿ ಬಡ್ಡಿ ದರಗಳ ನಡುವೆ ಮಾರ್ಜಿನವು 3–4 ಪ್ರತಿಶತಕ್ಕೆ ಮಿಕ್ಕಬಾರದು. ಸಹಕಾರಿಯು ಠೇವು ಸ್ವೀಕರಣೆಯ ಸರಾಸರಿ ವೆಚ್ಚವನ್ನು (ಅಥಣ ಠಜಿ ಆಜಿಠಿಘಣ) ಕಡಿಮೆ ಮಾಡಲು ಕಡಿಮೆ ಬಡ್ಡಿ ದರದ ಠೇವುಗಳು ಅಂದರೆ ಉಳಿತಾಯ ಠೇವು, ಪಿಗ್ಮಿ ಠೇವುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಸ್ವೀಕರಿಸಬೇಕು. ಸಾಲಗಳ ಮೇಲೆ ಯೋಗ್ಯ ಹಾಗು ಆಕರ್ಷಕ ಬಡ್ಡಿದರಗಳನ್ನು ನಿಗದಿಪಡಿಸಿ ಉತ್ತಮ ಸಾಲಗಾರ ಗ್ರಾಹಕರನ್ನು ಆಕರ್ಷಿಸುವದರೊಂದಿಗೆ ನಿಯಮಗಳ ಮಿತಿಯೊಳಗೆ ಗರಿಷ್ಠ ಮಟ್ಟದಲ್ಲಿ ಸಾಲ ವ್ಯವಹಾರಗಳನ್ನು ಉತ್ತಮ ರೀತಿಯಿಂದ ಬೆಳೆಸಿ ಸಹಕಾರಿಗೆ ಸಾಲ ವಸೂಲಿಯ ಖರ್ಚು ಇಲ್ಲದೆ ನಿಯಮಿತ ಆದಾಯವು ಹೆಚ್ಚಿಗೆ ಬರುವ ಹಾಗೇ ಸುಂದರ ಹಾಗೂ ಅಚ್ಚುಕಟ್ಟಾದ ಸಾಲ ಕೊಡುವ ವ್ಯವಸ್ಥೆಯನ್ನು ಏರ್ಪಡಿಸಿಕೊಳ್ಳಬೇಕು. ಅದಲ್ಲದೇ ಸಹಕಾರಿಯು ಬಡ್ಡಿಯೇತರ ಆದಾಯಗಳನ್ನು ಗಳಿಸಲು ಎಲ್ಲ ಅವಶ್ಯಕ ಕ್ರಮಗಳನ್ನು ಕೈಕೊಂಡು ಆದಾಯವನ್ನು ಹೆಚ್ಚಿಸಬೇಕು. ಅಡಳಿತದ ಅನಾವಶ್ಯಕ ಖರ್ಚುಗಳನ್ನು ಕಡಿತಗೊಳಿಸಬೇಕು. ಸಾಲ ಖಾತೆಗಳ ಮೇಲೆ ನಿಯಮಿತವಾಗಿ ಬಡ್ಡಿಗಳನ್ನು ವಸೂಲಿ ಮಾಡಿ ಅಂತಹ ಆದಾಯದ ರಕ್ಕಮನ್ನು ವ್ಯವಹಾರದಲ್ಲಿ ಲಾಭದಾಯಕ ರೀತಿಯಲ್ಲಿ ವಿನಿಯೋಗಿಸಿಕೊಳ್ಳಬೇಕು. ನಿಯಮಗಳ ಪ್ರಕಾರ ಹಾಗೂ ಆವಶ್ಯಕತೆಗಿಂತ ಹೆಚ್ಚಿಗೆ ಇದ್ದ ರಕ್ಕಮನ್ನು ಬ್ಯಾಂಕಿನಲ್ಲಿಯ ಚಾಲ್ತಿ ಖಾತೆಯಲ್ಲಿ ಅಥವಾ ಕೈಶಿಲ್ಕುದಲ್ಲಿ ಇಟ್ಟುಕೊಳ್ಳಬಾರದು. ಅಂತಹ ಹಣವು ಕೆಲವೇ ದಿವಸಗಳ ನಂತರ ಬೇಕಾಗಿದ್ದಲ್ಲಿ ಸ್ವಲ್ಪ ಹಣವನ್ನು ಬ್ಯಾಂಕಿನಲ್ಲಿ ಉಳಿತಾಯ ಖಾತೆಯಲ್ಲಿ ಜಮಾ ಇಟ್ಟು ಉಳಿದ ಹಣವನ್ನು ಅಲ್ಪಾವಧಿಗೆ ಅವಧಿ ಠೇವು ಅಥವಾ ಕಾಲ ಡೆಪಾಜಿಟದಲ್ಲಿ ಇಡಬೇಕು. ಯವುದೇ ಕಾರಣಕ್ಕೆ ಯವುದೇ ಸಾಲ ಖಾತೆಯಲ್ಲಿಯ ಸಾಲ ಸುಸ್ತಿ ಬಾಕಿಯಾದಲ್ಲಿ ಅಂಥಹ ಸುಸ್ತಿ ಬಾಕಿಯನ್ನು ದುಂಬಾಲು ಬಿದ್ದು ವಸೂಲಿ ಮಾಡಬೇಕು. ಹೀಗೆ ಮೇಲೆ ಬರೆದ ಅಂಶಗಳ ಮೂಲಕ ಸಹಕಾರಿಯು ಲಾಭವನ್ನು ಹೆಚ್ಚಿಸಬೇಕು.



ಸಹಕಾರಿಯು ಬಡ್ಡಿಯೇತರ ಆದಾಯಗಳನ್ನು ಗಳಿಸಲು ಎಲ್ಲ ಅವಶ್ಯಕ ಕ್ರಮಗಳನ್ನು ಕೈಕೊಂಡು ಆದಾಯವನ್ನು ಹೆಚ್ಚಿಸಬೇಕು. ಅಡಳಿತದ ಅನಾವಶ್ಯಕ ಖರ್ಚುಗಳನ್ನು ಕಡಿತಗೊಳಿಸಬೇಕು. ಸಾಲ ಖಾತೆಗಳ ಮೇಲೆ ನಿಯಮಿತವಾಗಿ ಬಡ್ಡಿಗಳನ್ನು ವಸೂಲಿ ಮಾಡಿ ಅಂತಹ ಆದಾಯದ ರಕ್ಕಮನ್ನು ವ್ಯವಹಾರದಲ್ಲಿ ಲಾಭದಾಯಕ ರೀತಿಯಲ್ಲಿ ವಿನಿಯೋಗಿಸಿಕೊಳ್ಳಬೇಕು.

27. ಸಹಕಾರಿಯ ಪ್ರತಿಯೊಬ್ಬ ಸದಸ್ಯರು (ಆಡಳಿತ ಮಂಡಳಿಯ ಸದಸ್ಯರನ್ನು ಕೂಡಿಕೊಂಡು) ಉಪನಿಭಂದನೆಗಳ ಪ್ರಕಾರ ಕಡ್ಡಾಯವಾಗಿ ಕನಿಷ್ಠ ವ್ಯವಹಾರ (Minimum Transaction)ಗಳನ್ನು ಮಾಡಬೇಕು. ಸದಸ್ಯರು ಸದರಿ ವ್ಯವಹಾರಗಳನ್ನು ಸತತ ಎರಡು ವರ್ಷಗಳ ಅವಧಿಯಲ್ಲಿ ಮಾಡದಿದ್ದಲ್ಲಿ ಅಥವಾ ನಿರಂತರ ಮೂರು ವಾರ್ಷಿಕ ಸಭೆಗಳಿಗೆ ಅನುಮತಿ ಪಡೆಯದೆ ಗೈರುಹಾಜರ ಉಳಿದಲ್ಲಿ ಅಂತಹ ಸದಸ್ಯರ ಸದಸ್ಯತ್ವ ನಿರ್ಗಮಗೊಳ್ಳುತ್ತದೆ (Ceasation of Membership) ಅದಲ್ಲದೆ ಯಾವುದೇ ಆಡಳಿತ ಮಂಡಳಿಯ ಸದಸ್ಯರು ತಮ್ಮ ಸಾಲದ ಕಂತನ್ನು ಸುಸ್ತಿಬಾಕಿ ಮಾಡಿದರೆ ಅಥವಾ ತಾವು ಜಾಮೀನು ಆಗಿದ್ದ ಯಾವುದೇ ಸದಸ್ಯರ ಸಾಲ ಖಾತೆಯಲ್ಲಿ ಮೂರು ಕಂತುಗಳು ಸುಸ್ತಿ ಬಾಕಿಯಾಗಿದ್ದರೆ ಅಂತಹ ಸದಸ್ಯರು ಆಡಳಿತ ಮಂಡಳಿಯಲ್ಲಿ ಮುಂದುವರೆಯಲು ಅನರ್ಹರಾಗುತ್ತಾರೆ (Disqualification of Directors) ಆದ್ದರಿಂದ ಎಲ್ಲ ಸದಸ್ಯರು ಮೇಲೆ ಬರೆದ ವ್ಯವಹಾರಗಳಲ್ಲಿ ಯಾವುದೇ ಲೋಪ–ದೋಷ ಎಸಗದಂತೆ ಎಚ್ಚರಿಕೆ ವಹಿಸಿ ತಮ್ಮ ಸದಸ್ಯತ್ವವನ್ನು ಮುಂದುವರಿಸಿಕೊಂಡು ಹೋಗಲು ಸಹಕಾರಿಯಲ್ಲಿ ಸರಿಯಾಗಿ ವ್ಯವಹರಿಸಬೇಕು.

28. ಆಡಳಿತ ಮಂಡಳಿಯು ಯಾವುದೇ ವರ್ಷಕ್ಕೆ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯನ್ನು ಜರಿಗಿಸದಿದ್ದಲ್ಲಿ, ಆಡಿಟರರನ್ನು ನಿಯಮಿಸಿ ಸಹಕಾರಿಯ ಆಡಿಟವನ್ನು ಮಾಡಿಸದಿದ್ದಲ್ಲಿ, ಆಡಳಿತ ಮಂಡಳಿಗೆ ಚುನಾವಣೆಯನ್ನು ಜರುಗಿಸದಿದ್ದಲ್ಲಿ ಅಂತಹ ಆಡಳಿತ ಮಂಡಳಿಯ ಅಧಿಕಾರದಲ್ಲಿ ಮುಂದೆವರೆಯಲು ಅನರ್ಹವಾಗುತ್ತದೆ (Disqualification of Board of Director) ಆದ್ದರಿಂದ ಸಹಕಾರಿಯ ಆಡಳಿತ ಮಂಡಳಿಗಳು ಮೇಲೆ ಬರೆದ ಎಲ್ಲ ಜವಾಬ್ದಾರಿಗಳನ್ನು ಸರಿಯಾಗಿ ನಿರ್ವಹಿಸಿ ತಾವು ಅಧಿಕಾರದಲ್ಲಿ ಮುಂದೆವರಿಯುವ ವಿಷಯದಲ್ಲಿ ಜಾಗ್ರತೆ ವಹಿಸಬೇಕು.

ಮುಂದಿನ ಸಂಚಿಕೆಗೆ...

# ಸೌಹಾರ್ದ ಸಹಕಾರಿಯು ಹೇಗೆ ಸುಂದರ ಹಾಗೂ ಸದೃಢವಾಗಿ ಬೆಳೆಯಬಲ್ಲುದು...?



■ ಜಿ. ಎಸ್. ಟೋಪಣ್ಣವರ, ವಿಭಾಗೀಯ ಅಧಿಕಾರಿ, ಬೆಳಗಾವಿ.

... ಹಿಂದಿನ ಸಂಚಿಕೆಯಿಂದ

19. ಮೇಲೆ ಬರೆದಂತೆ ಈ ಹೊತ್ತಿನ ದಿವಸ ಸಂಸ್ಥೆಗಳಲ್ಲಿ, ವ್ಯವಹಾರಗಳಲ್ಲಿ ಖರೀದಿದಾರರ ಸಾಮ್ರಾಜ್ಯ (Buyers Market) ಇರುವುದರಿಂದ ಸಂಸ್ಥೆಯು ಉತ್ತಮ ಗ್ರಾಹಕರನ್ನು (ಠೇವುದಾರರು, ಸಾಲಗಾರರು) ಶೋಧಿಸಬೇಕಾಗುತ್ತದೆ. ಅವರನ್ನು ಸಂಪರ್ಕಿಸಿ ಅವರ ಮನವೊಲಿಸಿ ಅವರನ್ನು ತಮ್ಮ ಗ್ರಾಹಕರನ್ನಾಗಿ ಮಾಡಿಕೊಳ್ಳಬೇಕಾಗುತ್ತದೆ. ಅದಲ್ಲದೇ ನಂತರ ಅವರಿಗೆ ಉತ್ತಮ ಸೇವೆಗಳನ್ನು ಒದಗಿಸಿ ತಮ್ಮ ಸಂಸ್ಥೆಯಲ್ಲಿ ಅವರು ನಿರಂತರ ಉಳಿಯಲು ಹಾಗೂ ತಮ್ಮಂತೆ ಅವರು ತಮ್ಮ ಸಹಕಾರಿಗೆ ಇನ್ನೂ ಹಲವಾರು ಗ್ರಾಹಕರನ್ನು ಕರೆದು ತರುವಂತೆ ಅವರ ಜೊತೆಗೆ ಸುಮಧುರ ಬಾಂಧವ್ಯ ಇಟ್ಟುಕೊಳ್ಳಬೇಕು. ಅಂದರೆ ಮಾತ್ರ ಸಹಕಾರಿಯು ತನ್ನ ವ್ಯವಹಾರದ ಗಾತ್ರವನ್ನು ವಿಸ್ತೀರ್ಣಗೊಳಿಸಲು ಸಾಧ್ಯವಾಗುವದು. ಈ ಕೆಲಸವನ್ನು ಮಾಡಲು ನೌಕರರು ಬಹಳ ಚಾಣಾಕ್ಷ, ಚುರುಕುತನ, ಮೃದು ಸ್ವಭಾವದವರು, ಸಹಕಾರಿ ಮನೋಭಾವದ ಹಾಗೂ ತಿಳುವಳಿಕೆ ಸ್ವಭಾವದವರು ಇರಬೇಕಾಗುತ್ತದೆ.

20. ಕ್ರೆಡಿಟ ವ್ಯವಹಾರ ಮಾಡುವ ಸೌಹಾರ್ದ ಸಹಕಾರಿಯ ತಾನು ಶೇರು ಬಂಡವಾಳ, ಠೇವುಗಳು ಹಾಗೂ ಸಾಲದ ವ್ಯವಹಾರಗಳು ಮಾತ್ರ ಅವರ ವ್ಯವಹಾರಿಕ ಸಾಧನಗಳು (Business Products) ಆಗಿರುತ್ತವೆ ನೌಕರರು. ಈ ವ್ಯವಹಾರಗಳ ಸೇವೆಗಳನ್ನು ಅಚ್ಚುಕಟ್ಟಾಗಿ ಹಾಗೂ ಪ್ರಾಮಾಣಿಕವಾಗಿ ಒದಗಿಸಬೇಕಾಗುತ್ತದೆ. ಕಡಿಮೆ ಬಡ್ಡಿದರದ ಠೇವುಗಳೆಂದರೆ ಉಳಿತಾಯ ಖಾತೆ, ಪಿಗ್ಮಿ ಖಾತೆಗಳು ಆಗಿರುತ್ತವೆ. ಸಹಕಾರಿಗಳಲ್ಲಿ ಚಾಲ್ತಿ ಖಾತೆ ಠೇವುಗಳು ಬರುವುದಿಲ್ಲ. ಏಕೆಂದರೆ ಚಾಲ್ತಿ ಖಾತೆಗಳಲ್ಲಿ ವ್ಯಾಪಾರಸ್ಥರು ಬ್ಯಾಂಕುಗಳಿಂದ ಚೆಕ್‌ಬುಕಗಳನ್ನು ಪಡೆದು ಜನರಿಗೆ ಪೇಮೆಂಟ ಸಲುವಾಗಿ ಚೆಕ್‌ವನ್ನು ತಮ್ಮ ಗ್ರಾಹಕರಿಗೆ ಕೊಡುತ್ತಾರೆ. ಚೆಕ್ ಬುಕ್ ವ್ಯವಸ್ಥೆಯನ್ನು ಸಹಕಾರಿ ಸಂಘಗಳು ಹಾಗೂ ಸೌಹಾರ್ದ ಸಹಕಾರಿಗಳು ಕಾನೂನು ಪ್ರಕಾರ ಮಾಡಲಿಕ್ಕಾಗದು. ಮೇಲೆ ಕಾಣಿಸಿದ ಠೇವುಗಳು ಕಡಿಮೆ ಬಡ್ಡಿ ದರದ್ದಿದ್ದು ಅವುಗಳನ್ನು ಹೆಚ್ಚಿಗೆ ಸಂಗ್ರಹಿಸಿದರೆ ಸಹಕಾರಿಗೆ ಸಾಲ ವ್ಯವಹಾರದಲ್ಲಿ ಹೆಚ್ಚಿಗೆ ಲಾಭ ದೊರಕುತ್ತದೆ. ಸಹಕಾರಿಯು ಠೇವು ಹಾಗೂ ಸಾಲಗಳ ಮೇಲಿನ ಬಡ್ಡಿದರಗಳನ್ನು ಸ್ಥಳೀಯ ಆರ್ಥಿಕ ಸಂಸ್ಥೆಗಳು ಠೇವುಗಳ ಮೇಲೆ ಕೊಡುವ ಹಾಗೂ ಸಾಲಗಳ ಮೇಲೆ ಪಡೆಯುವ ಬಡ್ಡಿ ದರಗಳನ್ನು ತಿಳಿದುಕೊಂಡು ಠೇವು ಮತ್ತು ಸಾಲಗಳ ನಡುವೆ ಆಡಳಿತದ 3–4 ಪ್ರತಿಶತ ಖರ್ಚಿನ ಮಾರ್ಜಿನನ್ನು ಇಟ್ಟುಕೊಂಡು ತಾನು ಸ್ವೀಕರಿಸುವ ಠೇವುಗಳು ಹಾಗೂ ಕೊಡುವ ಸಾಲಗಳ ಮೇಲಿನ ಬಡ್ಡಿದರಗಳನ್ನು ನಿರ್ಧರಿಸಬೇಕಾಗುತ್ತದೆ. ಠೇವು ಮತ್ತು ಸಾಲಗಳ ಮೇಲೆ ಆಕರಿಸುವ ಬಡ್ಡಿದರಗಳು ಸ್ಥಳೀಯ ಉತ್ತಮ ಸಹಕಾರಿ ಸಂಸ್ಥೆಗಿಂತ ಸಾಧ್ಯವಾದಷ್ಟು ಕಡಿಮೆ ಇಲ್ಲವಾದರೆ ಸರಿಸಮವಾದರೂ ಅಥವಾ 1/2 ಅಥವಾ 1 ಪ್ರತಿಶತ ಹೆಚ್ಚಿಗೆ ಬಡ್ಡಿದರಗಳನ್ನು ಇಡಬಹುದು. ಠೇವು ಮತ್ತು ಸಾಲಗಳ ಮೇಲೆ ಅತಿ ಹೆಚ್ಚು ಬಡ್ಡಿದರಗಳನ್ನು ಇಡುವುದು ಸಂಸ್ಥೆಗೆ ಮಾರಕವಾಗುತ್ತದೆ. ಠೇವುಗಳ ಮೇಲೆ ಹೆಚ್ಚು ಬಡ್ಡಿದರ ಕೊಟ್ಟು ಠೇವುಗಳನ್ನು ಸ್ವೀಕರಿಸಿದಲ್ಲಿ ಸಾಲಗಳ ಮೇಲೆ ಹೆಚ್ಚು ಬಡ್ಡಿದರಗಳನ್ನು ಆಕರಿಸಬೇಕಾಗುತ್ತದೆ. ಸಾಲಗಳ ಬಡ್ಡಿದರಗಳು ಸ್ಥಾನಿಕ ಆರ್ಥಿಕ ಸಂಸ್ಥೆಗಳ ಬಡ್ಡಿದರಕ್ಕಿಂತ ಬಹಳ ಹೆಚ್ಚಿಗೆ ಇದ್ದಲ್ಲಿ ಉತ್ತಮ ಸದಸ್ಯರು ಸಹಕಾರಿಯಲ್ಲಿ ಸಾಲ ಪಡೆಯುವುದಿಲ್ಲ. ಅಂತಹ ಪ್ರಸಂಗದಲ್ಲಿ ಆರ್ಥಿಕವಾಗಿ, ವ್ಯವಹಾರಿಕವಾಗಿ ಅಷ್ಟೊಂದು ಉತ್ತಮವಲ್ಲದ ಗ್ರಾಹಕರಿಗೆ ಸಾಲ ಕೊಟ್ಟಲ್ಲಿ ಎಲ್ಲ ವೇಳೆಗೆ ಮರುಪಾವತಿಯು ಸರಿಯಾಗಿ ಆಗಲಿಕ್ಕಿಲ್ಲ. ಇದರಿಂದ ಸುಸ್ತಿ ಬಾಕಿಗಳು ಬೆಳೆಯುವ ಸಂಭವ ಜಾಸ್ತಿ. ಸುಸ್ತಿ ಬಾಕಿ ಬೆಳೆಯುತ್ತ ಹೋದರೆ ಲಾಭದ ಮೇಲೆ ದುಷ್ಪರಿಣಾಮವಾಗಿ ಹಣಕಾಸಿನ ನಿರ್ವಹಣೆಯು ತೊಂದರೆದಾಯಕವಾಗುತ್ತದೆ. ಆದ್ದರಿಂದ ಸಂಸ್ಥೆಯು ತನ್ನ ಖರ್ಚು ವೆಚ್ಚಗಳನ್ನು ತಿಳಿದುಕೊಂಡು ಉತ್ತಮ ಗ್ರಾಹಕರನ್ನು ಆಕರ್ಷಿಸಲು ಸಾಲಗಳ ಮೇಲೆ ಶಕ್ಯವಾದಷ್ಟು ಕಡಿಮೆ ಬಡ್ಡಿದರಗಳನ್ನು ಇಡಬೇಕು. ಇದರ ಅನುಗುಣವಾಗಿ ಠೇವುಗಳ ಮೇಲೆ ಬಡ್ಡಿದರಗಳನ್ನು ನಿರ್ಧರಿಸಬೇಕು. ಆಕರ್ಷಕ ಠೇವುಗಳ ಮೇಲೆ ಬಡ್ಡಿದರಗಳು ಹಾಗೂ ಸಾಲಗಳ ಮೇಲೆ ಬಡ್ಡಿದರಗಳು ಅದಲ್ಲದೇ ಅಲ್ಹಾದಕರ ಸೇವೆ ಇವೆಲ್ಲವುಗಳನ್ನು ಶಾಸ್ತ್ರೋಕ್ತವಾಗಿ ಹಾಗೂ ಆಕರ್ಷಕವಾಗುವಂತೆ ಪೂರೈಸುವುದು ನಿರ್ದೇಶಕ ಮಂಡಳಿ ಹಾಗೂ ವ್ಯವಸ್ಥಾಪಕರ ಚಾಣಾಕ್ಷತನ ಹಾಗೂ ಬುದ್ಧಿವಂತಿಕೆಯನ್ನು ಅವಲಂಬಿಸಿದೆ.



21. ಸಹಕಾರಿಯು ನಾನಾ ತರಹದ ಸಾಲ ಯೋಜನೆಗಳನ್ನು ಸದಸ್ಯರಿಗೆ ಒದಗಿಸಿ ಸಾಲ ಖಾತೆಯಲ್ಲಿ ಯಾವುದೇ ಕಂತು ಸುಸ್ತಿ ಇಲ್ಲದೆ ಸಾಲ ತುಂಬಿದ ಅಂಥ ಗ್ರಾಹಕರಿಗೆ ಪ್ರೋತ್ಸಾಹಿಸಲು ಸಾಲ ಖಾತೆಯ ಮೇಲಿನ ಬಡ್ಡಿ ದರದಲ್ಲಿ 1% ದಷ್ಟು ರಿಬೇಟ ಕೊಡಬಹುದಾಗಿದೆ. ಇದರ ಸಲುವಾಗಿ ಉಪನಿಯಮಗಳಲ್ಲಿ ಅನುವು ಮಾಡಿಕೊಳ್ಳಬೇಕು. ಒಂದು ವೇಳೆ ಸಹಕಾರಿಯಲ್ಲಿ ಬಹಳಷ್ಟು ಹಣ ವಿನಿಯೋಗ ಆಗದೇ ಇದ್ದಲ್ಲಿ ಅಂತಹ ಹಣವನ್ನು ಗ್ರಾಹಕರ ಆಕರ್ಷಣೆಗಾಗಿ ಸಾಲ ವ್ಯವಹಾರದಲ್ಲಿ ಸಾಲ ಹಣದ ಸ್ಲ್ಯಾಬ ಅನುಸಾರ ಬೇರೆ ಬೇರೆ ಬಡ್ಡಿ ದರಗಳ ಯೋಜನೆಗಳನ್ನು ಮಾಡಬೇಕು ಅಲ್ಲದೇ ದಸರಾ, ದೀಪಾವಳಿ, ಯುಗಾದಿ, ಅಕ್ಷಯತೃತಿಗಳ ಸಂದರ್ಭಗಳಲ್ಲಿ ವಾಹನ ಸಾಲಗಳ ವಿಶಿಷ್ಟವಾದ ಕಡಿಮೆ ಬಡ್ಡಿ ದರಗಳ ಯೋಜನೆಗಳನ್ನು ಕೆಲವೇ ಅವಧಿಗಾಗಿ ರೂಪಿಸಿ ಸಾಲ ವ್ಯವಹಾರಗಳನ್ನು ಬೆಳೆಸಿಕೊಳ್ಳಬಹುದು ಹೀಗೆ ರೂಪಿಸಿದ ಸಾಲ ಯೋಜನೆ ಮುಖಾಂತರ ಹೆಚ್ಚಿನ ರಕ್ಕಮನ್ನು (Surplus Funds) ಲಾಭದಾಯಕವಾಗಿ ವಿನಯೋಗಿಸಬಹುದಾಗಿದೆ.

22. ಸಹಕಾರಿಗಳಲ್ಲಿ ಜಾಮೀನು ಸಾಲಗಳನ್ನು, ಮಾಧ್ಯಮಿಕ ಸಾಲಗಳನ್ನು, ಗೃಹ ನಿರ್ಮಾಣ ಸಾಲಗಳನ್ನು, ಕ್ಯಾಶ ಕ್ರೆಡಿಟ ಸಾಲಗಳನ್ನು ಹಾಗೂ ಸೋಲಾರ ಸಾಲಗಳನ್ನು ಕೊಡಲಾಗುತ್ತಿದೆ. ಸಹಕಾರಿಯು ಗರಿಷ್ಠ 3 ರಿಂದ 5 ವರ್ಷಗಳ ಅವಧಿಗೆ ಠೇವುಗಳನ್ನು ಸ್ವೀಕರಿಸುತ್ತಿದೆ. ಆದರೆ ತಾನು ಕೊಡುವ ಮಾಧ್ಯಮಿಕ ಹಾಗೂ ಗೃಹ ನಿರ್ಮಾಣ ಸಾಲಗಳ ಅವಧಿ 6 ರಿಂದ 10 ವರ್ಷಗಳಷ್ಟು ಇರುತ್ತದೆ. ಇಲ್ಲಿ ತಾನು ಮಂಜೂರ ಮಾಡಿದ ಸಾಲಗಳ ಮರುಪಾವತಿ ಅವಧಿ ಜಾಸ್ತಿ ಇದ್ದು ತಾನು ಸ್ವೀಕರಿಸುವ ಠೇವುಗಳ ಅವಧಿ ಕಡಿಮೆ ಇರುತ್ತದೆ. ಈ ಅಂತರಗಳನ್ನು ಕಡಿಮೆ ಮಾಡಲು ಸಹಕಾರಿಯ ಮಧ್ಯಮಾವಧಿ ಹಾಗೂ ಗೃಹ ನಿರ್ಮಾಣ ಸಾಲಗಳನ್ನು ಕಡಿಮೆ ಮಾಡಿ ಅಲ್ಪಾವಧಿ ಸಾಲಗಳಾದ ಚಿನ್ನ ಹಾಗೂ ಬೆಳ್ಳಿ ಒತ್ತಿ ಸಾಲ, ಪೇಟೆಯಲ್ಲಿದ್ದ ಸರಕುಗಳ ಒತ್ತಿ ಸಾಲ, 2–3 ಚಕ್ರಗಳ ವಾಹನ ಸಾಲ, ಪಗಾರದಲ್ಲಿ ಕಡಿತ ಒಪ್ಪಂದದೊಂದಿಗೆ ನೌಕರರಿಗೆ ಕೊಡುವ ಪಗಾರ ಸಾಲ, ಡ್ಯು ತಾರಿಖ ಕಡಿಮೆ ಇರುವ ಎನ್.ಎಸ್.ಸಿ. ಒತ್ತಿ ಸಾಲ, ಉಗ್ರಾಣ ರಶೀದಿಗಳ ಮೇಲೆ ಸಾಲಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಮಂಜೂರು ಮಾಡಬೇಕು. ಈ ಎಲ್ಲ ಅಲ್ಪಾವಧಿ ಸಾಲಗಳು ಭದ್ರತೆಯುಳ್ಳವಾಗಿದ್ದು ಸಾಲ ವಸೂಲಿಗಾಗಿ ಯಾವದೇ ತೊಂದರೆ ಇರುವುದಿಲ್ಲ. ಅಲ್ಲದೇ ಬಡ್ಡಿ ಆದಾಯವು ಮೇಲಿಂದ ಮೇಲೆ ನಿಯಮಿತವಾಗಿ ಬರುತ್ತದೆ. ಇದರಿಂದಾಗಿ ಸಹಕಾರಿಯ ಹಣಕಾಸಿನ ಚಕ್ರ ಸುಗಮವಾಗಿ ತಿರುಗುತ್ತದೆ.

23. ಸಹಕಾರಿಯಲ್ಲಿ ಜಮೆ ಇರುವ ಠೇವು ಹಣವು ಠೇವಿದಾರದಿದ್ದು ಸದರಿ ಹಣವನ್ನು ಠೇವಿದಾರರು ಬೇಡಿದಾಗ ತಕ್ಷಣ ಕೊಡಬೇಕಾಗುತ್ತದೆ ಸದರಿ ಹಣವನ್ನು ಸ್ಥಿರಾಸ್ತಿ

# ಅನುಭವಿ ಸಹಕಾರಿ ರಾಜ್ಯದ ನೂತನ ಮುಖ್ಯಮಂತ್ರಿ ಶ್ರೀ ಡಿ.ವಿ.ಸದಾನಂದಗೌಡ



ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಆಗಷ್ಟ್ 4 ರಂದು ಪ್ರಮಾಣ ವಚನ ಸ್ವೀಕರಿಸಿದ ಶ್ರೀ ಡಿ.ವಿ.ಸದಾನಂದಗೌಡರಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರ, ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ ಹಾಗೂ ಆಡಳಿತ ಮಂಡಳಿ ಸದಸ್ಯರು ರಾಜ್ಯದ ಸಮಸ್ತ ಸೌಹಾರ್ದ ಸಹಕಾರಿಗಳ ಪರವಾಗಿ ಶುಭ ಹಾರೈಸಿದ್ದಾರೆ.

ರಾಜ್ಯದ ಕರಾವಳಿ ಜಿಲ್ಲೆಯ ಸುಳ್ಯ ತಾಲ್ಲೂಕಿನ ಮಂಡೆಕೋಲು ದೇವರಗುಂಡ ಗ್ರಾಮದ ಕೃಷಿಕುಟುಂಬದಿಂದ ಬಂದವರು. ನಿಜವಾದ ಮಣ್ಣಿನ ಮಗ. ಅಪ್ಪಟ ರೈತ. ಪ್ರಾಥಮಿಕ ಶಿಕ್ಷಣವನ್ನು ಪುತ್ತೂರಿನ ಕೈಯ್ಯೂರು, ಹಾಗೂ ಸುಳ್ಯ ತಾಲ್ಲೂಕಿನಲ್ಲಿ ಪಡೆದ ನಂತರ ಪುತ್ತೂರಿನ ಸೆಂಟ ಫಿಲೊಮಿನಾ ಕಾಲೇಜಿನಲ್ಲಿ ಪದವಿ ಉಡುಪಿಯ ವೈಕುಂಠ ಬಾಳಿಗಾ ಕಾನೂನು ವಿದ್ಯಾಲಯದಿಂದ ಕಾನೂನು ಪದವಿ ಪಡೆದು ವಕೀಲಿ ವೃತ್ತಿ ಆರಂಬಿಸಿದರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಚಟುವಟಿಕೆಗಳಿಂದ ಪ್ರಭಾವಿತರಾದ ಇವರು ಸಕ್ರೀಯ ಕಾರ್ಯಕತೃರಾಗಿದ್ದಾರೆ. ವಿದ್ಯಾರ್ಥಿ ಜೀವನದಿಂದಲೇ ದೇಶಭಕ್ತಿ ಹಾಗೂ ಹೋರಾಟ ಮನೋಭಾವವುಳ್ಳವರಾದ ಶ್ರೀಯುತರು ಅಖಿಲಭಾರತ ವಿದ್ಯಾರ್ಥಿ ಪರಿಷತನಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡವರು. ಸಮಾಜ ಸೇವೆ ಇವರ ರಕ್ತಗತವಾಗಿ ಬಂದಿರುವ ಗುಣ. ಸಹಕಾರಿ ಕ್ಷೇತ್ರದಲ್ಲೂ ತೊಡಗಿಸಿಕೊಂಡು ಪ್ರಾಥಮಿಕ ಹಂತದಿಂದ ರಾಜ್ಯಮಟ್ಟದ ಸಹಕಾರಿ ಸಂಸ್ಥೆಗಳಲ್ಲಿ ನಿರ್ದೇಶಕರಾಗಿ ಪದಾಧಿಕಾರಿಯಾಗಿ ಕಾರ್ಯನಿರ್ವಹಿಸಿದ ಅನುಭವ. ನಂತರ ರಾಜಕೀಯದಲ್ಲಿ ,ಶಾಸಕರಾಗಿ, ಸಂಸದರಾಗಿ ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಬೆಳೆಯುತ್ತಲೆ ಬಂದಿದ್ದಾರೆ. ಇದೀಗ ರಾಜ್ಯವನ್ನು ಪ್ರಗತಿಯತ್ತ ಮುನ್ನಡೆಸುವ ಗುರುತರ ಜವಾಬ್ದಾರಿ ಶ್ರೀ ಸದಾನಣದರ ಪಾಲಿಗೆ ಬಂದಿರುವುದು ಕರಾವಳಿಯ ಜನತೆಗೆ ಸಂತಸದ ಹಾಗೂ ಹೆಮ್ಮೆಯ ವಿಷಯ

ಮುಗುಳು ನಗೆಯ, ಸರಳ ಸಜ್ಜನಿಕೆಯ, ನೇರ ನುಡಿಯ ಈ ನೂತನ ಮುಖ್ಯಮಂತ್ರಿ ಶ್ರೀ ಡಿ.ವಿ.ಸದಾನಂದಗಡರಿಗೂ ಸಹಕಾರಿ ಕ್ಷೇತ್ರಕ್ಕೂ ಬಾಂಧವ್ಯ ಬಹಳ ಗಾಢವಾದದ್ದು ಹಾಗೂ ಹಳೆಯದು. ಸಹಕಾರ ತತ್ವಗಳಲ್ಲಿ ನಂಬಿಕೆ ಉಳ್ಳವರಾದ ಶ್ರೀಯುತರು ಸಹಕಾರ ಕ್ಷೇತ್ರದ ಮೂಲಕ ರೈತರಿಗೆ, ಸಮಾಜದ ಆರ್ಥಿಕವಾಗಿ ಹಿಂದುಳಿದ ವರ್ಗದ ಜನರಿಗೆ ಸೇವೆ ಸಲ್ಲಿಸಲು ಸಾಧ್ಯವೆಂದು ದೃಢವಾಗಿ ನಂಬಿದವರು. ಈ ದೇಶದ ಅರ್ಥವ್ಯವಸ್ಥೆಯಲ್ಲಿ ಸಹಕಾರ ಕ್ಷೇತ್ರವನ್ನು ಬಿಟ್ಟರೆ ಇಂಥಹ ಪರ್ಯಾಯ ವ್ಯವಸ್ಥೆ ಬೇರೊಂದಿಲ್ಲ ಆದ್ದರಿಂದ ಈ ವ್ಯವಸ್ಥೆಯನ್ನು ಬಲಪಡಿಸಬೇಕು ಎಂದು ಅಭಿಪ್ರಾಯವುಳ್ಳವರಾಗಿದ್ದಾರೆ.



ಮಂಡೆಕೋಲು ವ್ಯವಸಾಯ ಸಹಕಾರ ಸಂಘದ ಅಧ್ಯಕ್ಷರಾಗಿ. ಸುಳ್ಯ ಪ್ರಾಥಮಿಕ ಕೃಷಿ ಸಹಕಾರ ಬ್ಯಾಂಕಿನ ಅಧ್ಯಕ್ಷರಾಗಿ, ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ನಿರ್ದೇಶಕರಾಗಿ, ಪ್ರತಿಷ್ಠಿತ ಕ್ಯಾಂಪ್ಕೋ ಸಹಕಾರಿ ಸಂಸ್ಥೆಯ ನಿರ್ದೇಶಕರಾಗಿ ಹಾಗೂ ಕೆ.ಎಮ್.ಎಫ್ ನಿರ್ದೇಶಕರಾಗಿ ಸಹಕಾರಿ ಕ್ಷೇತ್ರದ ಸಂಪೂರ್ಣ ಜ್ಞಾನ ಹಾಗೂ ಅನುಭವ ಶ್ರೀಯುತರಿಗಿದೆ. ಶ್ರೀಯುತರು ಸುಳ್ಯ ಪ್ರಾಥಮಿಕ ಕೃಷಿ ಸಹಕಾರ ಬ್ಯಾಂಕಿನ ಅಧ್ಯಕ್ಷರಾಗಿರುವ ಅವಧಿಯಲ್ಲಿ ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಯಾಗುವುದಕ್ಕೆ ಶ್ರೀಯುತರು ಸಕ್ರೀಯ ಪಾತ್ರ ನಿರ್ವಹಿಸಿದ್ದಾರೆ. ಇಂಥವರು ಈಗ ರಾಜ್ಯದ ಮುಖ್ಯ ಮಂತ್ರಿಯಾಗಿರುವುದು ಸಹಕಾರಿಗಳಿಗೆಲ್ಲ ಹೆಮ್ಮೆಯ ವಿಷಯ. ಶ್ರೀಯುತ ಅಧಿಕಾರಾವಧಿಯಲ್ಲಿ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಉತ್ತಮ ಪ್ರೋತ್ಸಾಹ ದೊರಕುವುದರಲ್ಲಿ ಸಂದೇಹವಿಲ್ಲ ಎಂದು ಆಶಿಸಲಾಗಿದೆ.

# ಸುಕೋ ಬ್ಯಾಂಕ್‌ವಾರ್ತೆ ಬ್ಯಾಂಕಿಂಗ್ ಕ್ಷೇತ್ರದ ಅಭಿವೃದ್ಧಿಗೆ ವಿಶ್ವಾಸಾರ್ಹತೆ ಅಗತ್ಯ

## ಮನೋಹರ ಮಸ್ಕಿ ಎಮ್.ಎಲ್.ಸಿ.




ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರತಿಷ್ಠಿತ ಬ್ಯಾಂಕುಗಳಲ್ಲಿ ಒಂದಾದ ಸುಕೋ ಬ್ಯಾಂಕ ಈಗಾಗಲೇ ರಾಜ್ಯದಾದ್ಯಂತ 9 ಶಾಖೆಗಳನ್ನು ಹೊಂದಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ.

ಹುಬ್ಬಳ್ಳಿಯ ವರ್ಧಮಾನ ಬ್ಯಾಂಕನ್ನು ಸುಕೋ ಬ್ಯಾಂಕನಲ್ಲಿ ವಿಲೀನಿಕರಣಗೊಳಿಸಲಾಗಿದೆ. ಇದು ಎರಡನೇಯ ವಿಲೀನವಾಗಿದೆ 5 ವರ್ಷಗಳ ನಂತರ ಶೇರುದಾರರಿಗೆ ಲಾಭಾಂಶ ದೊರಕಲಿದೆ. ಎಂದು ವಿಧಾನ ಪರಿಷತ ಸದಸ್ಯ ಹಾಗೂ ಸುಕೋ ಬ್ಯಾಂಕ ಅಧ್ಯಕ್ಷ ಶ್ರೀ ಮನೋಹರ ಮಸ್ಕಿಯವರು ತಿಳಿಸಿ ಇದರಿಂದಾಗಿ ಬ್ಯಂಕಿಂಗ ಕ್ಷೇತ್ರದಲ್ಲಿ ವಿಶ್ವಾಸಾರ್ಹತೆ ಹೆಚ್ಚಿಸಲು ಸಾಧ್ಯವಾಗುತ್ತದೆ ಎಂದರು.

ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಸಭಾಭವನದಲ್ಲಿ ಏರ್ಪಡಿಸಲಾಗಿದ್ದ ವಿಚಾರ ಸಂಕೀರ್ಣದಲ್ಲಿ ಮಾತನಾಡಿದ ಶ್ರೀಯುತರು ಬಳ್ಳಾರಿ ಮಹಿಳಾ ಶಕ್ತಿ ಬ್ಯಾಂಕಿನ ವಿಲೀನಗೊಳಿಸಿಕೊಳ್ಳುವ ಮೂಲಕ ಕರ್ನಾಟಕದಲ್ಲಿ ಕೊ-ಆಪರೇಟಿವ್ ಬ್ಯಾಂಕುಗಳ ಇತಿಹಾಸದಲ್ಲಿ ದಾಖಲ ಬರೆದಿದೆ ಅವಿಭಜಿತ ಧಾರವಾಡ ಜಿಲ್ಲೆಯಲ್ಲಿ ಹೊಸ ವಿಶ್ವಾಸ ಮೂಡಿಸಿದೆ ಎಂದು ತಿಳಿಸಿದರು.

ಶೀಘ್ರದಲ್ಲಿ ಎಸ್.ಎಮ್.ಎಸ್. ಬ್ಯಾಂಕಿಂಗ ಹಾಗೂ ಅಂತರ್ಜಾಲ ಬ್ಯಾಂಕಿಂಗ ಸೇವೆಯನ್ನು ಪ್ರಾರಂಭಿಸಲಾಗುವುದೆಂದು ತಿಳಿಸಿದರು. ಸಭೆಯಲ್ಲಿ ವರ್ಧಮಾನ ಸಹಕಾರ ಬ್ಯಾಂಕಿನ ಮಾಜಿ ಅಧ್ಯಕ್ಷ ಶ್ರೀ ಮಂಟಗಣೇಕರ ವಾಣಿಜ್ಯೋದ್ಯಮ ಸಂಸ್ಥೆಯ ಅಧ್ಯಕ್ಷ ಶ್ರೀ ಎಮ್.ಸಿ.ಹಿರೇಮಠಲ್ಲಾತನಾಡಿದರು. ಮಾಜಿ ಅಧ್ಯಕ್ಷ ಶ್ರೀ ಶಂಕರಣ್ಣ ಮುನವಳ್ಳಿ, ಶ್ರೀ ಸಿ.ಬಿ.ಪಾಟೀಲ್‌ಗೌರವ ಕಾರ್ಯದರ್ಶಿ ಶ್ರೀ ಕೆ.ಡಿ.ಕೋಟೇಕರ ಮೊದಲಾದವರು ಉಪಸ್ಥಿತರಿದ್ದರು.

## ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 10 ನೇ ವಾರ್ಷಿಕ ಸಾಮಾನ್ಯ ಸಭೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 10 ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 24-8-2011 ರಂದು ಬೆಂಗಳೂರಿನ ಸರ್ ಪುಟ್ಟಣ್ಣಚೆಟ್ಟಿ ಪುರಭವನ ( ಟೌನ ಹಾಲ್) ಬೆಳಿಗ್ಗೆ 11-00 ಘಂಟೆಗೆ ನಡೆಯುತ್ತದೆ. ಸದಸ್ಯ ಸಹಕಾರಿಗಳ ಪ್ರತಿನಿಧಿಗಳು ಮಾತ್ರ ತಮ್ಮ ಗುರುತಿನ ಚೀಟಿಯೊಡನೆ ಭಾಗವಹಿಸಲು ಕೋರಿದೆ. ಪ್ರತಿನಿಧಿಗಳಲ್ಲದವರು ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತು ಸಾಮಾನ್ಯ ಸಭೆಯ ಕಾರ್ಯಕಲಾಪಗಳನ್ನು ವಿಕ್ಷೀಸಬಹುದಾಗಿದೆ.

## ಎಮ್.ಬಿ.ಎ. ಪದವಿ ಪ್ರಧಾನ ಸಮಾರಂಭ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಂಗ ಸಂಸ್ಥೆಯಾಗಿದ್ದ ಸಹಕಾರ ಪ್ರತಿಷ್ಠಾನ-ಕರ್ನಾಟಕ (ಸ್ವಾಪ-ಕೆ) ವತಿಯಿಂದ ಮೈಸೂರು ವಿಶ್ವವಿದ್ಯಾಲಯದ ಸಹಯೋಗದಲ್ಲಿ ನಡೆಸಿದ ಎಮ್.ಬಿ.ಎ. (ಬ್ಯಾಂಕಿಂಗ್ ಆಂಡ ಫೈನಾನ್ಸ) ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಸಮಾರಂಭವನ್ನು ದಿನಾಂಕ 24/8/2011 ರಂದು ಬೆಳಿಗ್ಗೆ 10-00 ಘಂಟೆಗೆ ಬೆಂಗಳೂರಿನ ಸರ್ ಪುಟ್ಟಣ್ಣಚೆಟ್ಟಿ ಪುರಭವನ (ಟೌನ್ ಹಾಲ್) ನಲ್ಲಿ ಏರ್ಪಡಿಸಲಾಗಿದೆ. ವಿದ್ಯಾರ್ಥಿಗಳು ಭಾಗವಹಿಸಿ ಪದವಿ ಸರ್ಟಿಫಿಕೇಟಗಳನ್ನು ಪಡೆದುಕೊಳ್ಳಲು ಸೂಚಿಸಿದೆ.

## ಶೀಘ್ರದಲ್ಲಿ ಗುಲ್ಬರ್ಗಾ ವಿಭಾಗೀಯ ಕಚೇರಿ ಪ್ರಾರಂಭ ಹಾಗೂ ಗುಲ್ಬರ್ಗಾ ವಿಭಾಗೀಯ ಸಮಾವೇಶ

ಸಂಯುಕ್ತ ಸಹಕಾರಿಯ ಗುಲ್ಬರ್ಗಾ ವಿಭಾಗೀಯ ಕಚೇರಿಯನ್ನು ಶೀಘ್ರದಲ್ಲಿಯೇ ಪ್ರಾರಂಭಿಸಲಾಗುವುದು. ಈಗಾಗಲೆ ಪೂರ್ವಭಾವಿ ಸಿದ್ಧತಾಕಾರ್ಯಗಳು ನಡೆದಿದ್ದು ಸದರಿ ಕಾರ್ಯಗಳು ಪೂರ್ಣಗೊಂಡನಂತರ ವಿಭಾಗೀಯ ಕಚೇರಿಯನ್ನು ಪ್ರಾರಂಭಿಸಲು ಕ್ರಮವಿಡಲಾಗುವುದು. ಹಾಗೂ ಇದೇ ಸಂದರ್ಭದಲ್ಲಿ ಗುಲ್ಬರ್ಗಾ ವಿಭಾಗೀಯ ಸಮಾವೇಶವನ್ನು ಹಮ್ಮಿಕೊಳ್ಳಲಾಗುವುದು. ಸಮಾವೇಶದಲ್ಲಿ ಚರ್ಚಿಸಬಹುದಾದ ವಿಷಯಗಳ ಬಗ್ಗೆ ಸಹಕಾರಿಗಳು ಸಂಯುಕ್ತ ಸಹಕಾರಿಗೆ ಬರೆದು ತಿಳಿಸಲು ಕೋರಿದೆ.

## ಅನುಭವಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆ

ಸೌಹಾರ್ದ ಸಹಕಾರಿಗಳ ಶಾಸನಬದ್ದ ಕಾರ್ಯನಿರ್ವಹಣೆಗೆ ಪೂರಕವಾಗುವ ಹಾಗೂ ಅಭಿವೃದ್ಧಿದೃಷ್ಟಿಯಿಂದ ಅಗತ್ಯವೆನಿಸ ಬಹುದಾದ ಮಾರ್ಗಸೂಚಿಗಳ ರಚನೆ ಕುರಿತು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರ ಅಧ್ಯಕ್ಷತೆಯಲ್ಲಿ ಸಂಯುಕ್ತ ಸಹಕಾರಿಯ ಅಧಿಕಾರಿಗಳ ಹಾಗೂ ಕೆಲವು ಸೌಹಾರ್ದ ಸಹಕಾರಿಗಳ ಅನುಭವಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆ ದಿನಾಂಕ 9/8/2011 ರಂದು ನಡೆದು ಹಾಲಿ ಸಂಯುಕ್ತ ಸಹಕಾರಿಯಿಂದ ಕಳುಹಿಸಿರುವ ಮಾರ್ಗಸೂಚಿಗಳು ಮತ್ತು ಸೌಹಾರ್ದ ಸಹಕಾರಿಗಳ ಉತ್ತಮ ಕಾರ್ಯನಿರ್ವಹಣೆಯ ದೃಷ್ಟಿಯಿಂದ ಅಗತ್ಯವಿರುವ ಬೇರೆ ಬೇರೆ ವಿಷಯಗಳ ಬಗ್ಗೆ ಮಾರ್ಗಸೂಚಿಗಳ ರಚನೆ ಕುರಿತಂತೆ ಚರ್ಚಿಸಲಾಯಿತು. ಇವುಗಳಲ್ಲದೆ ಬೇರೆ ಯಾವುದಾದರೂ ವಿಷ್ಯಗಳಿದ್ದರೆ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಪತ್ರ ಮುಖೇಣ ತುರ್ತಾಗಿ ತಿಳಿಸಲು ಕೋರಿದೆ.

## ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆ



**ಶರಣಗೌಡ ಕಮತಗಿ**
ಅಧ್ಯಕ್ಷರು



**ಶ್ರೀಮತಿ ವಿಜಯಲಕ್ಷ್ಮೀ ಕುಪ್ಪಿ**
ಉಪಾಧ್ಯಕ್ಷರು

ಸಾಯಿಬಾಬಾ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿಯ ಸಭೆ ದಿನಾಂಕ 21-4-2011 ರಂದು ಸಹಕಾರಿಯ ನಿರ್ದೇಶಕರಾದ ಶ್ರೀ ಭೀಮನಗೌಡ ಇಟಗಿ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

ಇದೇ ಸಂದರ್ಭದಲ್ಲಿ ನೂತನ ಅಧ್ಯಕ್ಷರಾಗಿ ಶ್ರೀ ಶರಣಗೌಡ ಕಮತಗಿ ಹಾಗೂ ಉಪಾಧ್ಯಕ್ಷರಾಗಿ ಶ್ರೀಮತಿ ವಿಜಯಲಕ್ಷ್ಮೀ ಕುಪ್ಪಿ ಇವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಅಂಶಗಳು ಇವೆ ಎಂದು ಗೊತ್ತಾಗುತ್ತದೆ. ಮಿಕ್ಕ ಅಂಶಗಳು ಆಗಾಗ್ಗೆ –– ಬಹುಶ: ಸೀರೆ ಅಥವಾ ಜೀನ್ಸ್ ಮುಂತಾದುವುಗಳಂತೆ – – ಬದಲಾಗುತ್ತಿರುತ್ತವೆ ಎನ್ನಬಹುದೇನೋ!

ನಾವು ಮೇಲೆ ಕಾಣಿಸಿದ ಅಧಿಕಾರ ಅಥವಾ ಹೊಣೆಗಾರಿಕೆ ಗಳಿಗೆ ಸಂಬಂಧಿಸಿದಂತೆ ಪಟ್ಟಿ ಮಾಡಿರುವ 19 ಅಂಶಗಳನ್ನು ಮತ್ತು ಅವು ಯಾವ ಯಾವ ಕಾಯಿದೆಯಲ್ಲಿ ಯಾವಾಗ ಯಾವಾಗ ಇದ್ದವು ಎಂಬುದನ್ನು ಪಟ್ಟಿಗಳಲ್ಲಿ ತೋರಿಸುವುದು ಬಹುಶ: ಹೆಚ್ಚು ಸೂಕ್ತವಾಗಬಹುದು.

ಅದರಂತೆ, ಮೂಲ ಕಾಯಿದೆಯಲ್ಲಿ ಈ ಅಂಶಗಳನ್ನು ಪಟ್ಟಿ ಒಂದರಲ್ಲಿ ತೋರಿಸಿದೆ:

**ಪಟ್ಟಿ 1 – ಮೂಲ ಕಾಯಿದೆ**

| ಕ್ರ. ಸಂ. | ಕಾಯಿದೆಯ ಅಧಿಕಾರ/ ಹೊಣೆಗಾರಿಕೆ | ಮೂಲ ಕಾಯಿದೆ 2011 | 2001 | 1992 | 1977 | 1959 |
|---|---|---|---|---|---|---|
| 1. | ನಿಬಂಧಕರಿಂದ ಉಪನಿಯಮ ತಿದ್ದುಪಡಿ | ಇದೆ | ಇದೆ | ಇದೆ | – | – |
| 2. | ಅನುಮತಿ ಇಲ್ಲದೆ ಸದಸ್ಯತ್ವ | ಇದೆ | ಇದೆ | ಇದೆ | ಇದೆ | – |
| 3. | ವಿಲೀನ/ ವಿಭಜನೆ | – | – | ಇದೆ | ಇದೆ | – |
| 4. | ಆಡಳಿತ ಮಂಡಳಿ ರದ್ದತಿ | ಇದೆ | ಇದೆ | ಇದೆ | ಇದೆ | ಇದೆ |
| 5. | ಆಡಳಿತ ಮಂಡಳಿ ಸದಸ್ಯರ ಅನರ್ಹತೆ | ಇದೆ | ಇದೆ | ಇದೆ | ಇದೆ | ಇದೆ |
| 6. | ನೋಟೀಸ್ ನೀಡದೆ ಆಡಳಿತ ಮಂಡಳಿ ರದ್ದತಿ | – | – | ಇದೆ | – | – |
| 7. | 1/3 ರಷ್ಟು ಸರ್ಕಾರದ ಪ್ರತಿನಿಧಿಗಳು | ಇದೆ | ಇದೆ | ಇದೆ | ಇದೆ | – |
| 8. | ವೀಟೋ ಅಧಿಕಾರ | – | – | – | – | – |
| 9 | ನಿರ್ಣಯಗಳನ್ನು ತಡೆಹಿಡಿಯುವುದು | – | – | – | – | – |
| 10. | ನಿರ್ದೇಶನ ನೀಡಿಕೆ | ಇದೆ | ಇದೆ | ಇದೆ | ಇದೆ | – |
| 11. | ಆಡಳಿತದಲ್ಲಿ ಹತೋಟಿ | – | ಇದೆ | ಇದೆ | – | – |
| 12. | ಸರ್ಕಾರದಿಂದ ಲೆಕ್ಕ ಪರಿಶೋಧನೆ | ಇದೆ | ಇದೆ | ಇದೆ | ಇದೆ | ಇದೆ |
| 13. | ನಿಬಂಧಕರಿಂದ ವಿಚಾರಣೆ | ಇದೆ | ಇದೆ | ಇದೆ | ಇದೆ | ಇದೆ |
| 14. | ಚುನಾವಣೆ ಮುಂದೂಡಿಕೆ | – | ಇದೆ | ಇದೆ | ಇದೆ | – |
| 15. | ಆಯ್ದ ಸಂಘಗಳಿಗೆ ಕಾನೂನು ತಿದ್ದುಪಡಿ | ಇದೆ | ಇದೆ | ಇದೆ | ಇದೆ | ಇದೆ |
| 16. | ಸಿಬ್ಬಂದಿ ಬಗ್ಗೆ ನಿಬಂಧಕರ ಅನುಮತಿ | – | ಇದೆ | ಇದೆ | ಇದೆ | ಇದೆ |
| 17. | ಲಾಭಾಂಶಕ್ಕ ಅಲ್ಪ ಮಿತಿ | – | – | ಇದೆ | ಇದೆ | ಇದೆ |
| 18. | ಸಾಲಕ್ಕೆಮಿತಿ | – | ಇದೆ | ಇದೆ | ಇದೆ | ಇದೆ |
| 19. | ಪಾಲುಗಾರಿಕೆ ಇತ್ಯಾದಿಗೆ ನಿರ್ಬಂಧ | – | ಇದೆ | ಇದೆ | ಇದೆ | ಇದೆ |

*ಸೌಹಾರ್ದ ಕಾಯಿದೆಯಲ್ಲಿ ಈ ಅಂಶಗಳನ್ನು ಪಟ್ಟಿ ಎರಡರಲ್ಲಿ ತೋರಿಸಿದೆ :*

**ಪಟ್ಟಿ 2 – ಸೌಹಾರ್ದ ಕಾಯಿದೆ**

| ಕ್ರ.ಸಂ. | ಕಾಯಿದೆಯ ಅಧಿಕಾರ/ ಹೊಣೆಗಾರಿಕೆ | 2001ರಲ್ಲಿ | 2011ರಲ್ಲಿ |
|---|---|---|---|
| 1 | ನಿಬಂಧಕರಿಂದ ಉಪನಿಯಮ ತಿದ್ದುಪಡಿ | – | – |
| 2 | ಅನುಮತಿ ಇಲ್ಲದೆ ಸದಸ್ಯತ್ವ | – | – |
| 3 | ವಿಲೀನ/ ವಿಭಜನೆ | – | – |
| 4 | ಆಡಳಿತ ಮಂಡಳಿ ರದ್ದತಿ | ಇದೆ* | ಇದೆ* |
| 5 | ಆಡಳಿತ ಮಂಡಳಿ ಸದಸ್ಯರ ಅನರ್ಹತೆ | – | ಇದೆ |
| 6 | ನೋಟೀಸ್ ನೀಡದೆ ಆಡಳಿತ ಮಂಡಳಿ ರದ್ದತಿ | – | – |
| 7 | 1/3 ರಷ್ಟು ಸರ್ಕಾರದ ಪ್ರತಿನಿಧಿಗಳು | – | – |
| 8 | ವೀಟೋ ಅಧಿಕಾರ | – | – |
| 9 | ನಿರ್ಣಯಗಳನ್ನು ತಡೆಹಿಡಿಯುವುದು | – | – |
| 10 | ನಿರ್ದೇಶನ ನೀಡಿಕೆ | – | – |
| 11 | ಆಡಳಿತದಲ್ಲಿ ಹತೋಟಿ | – | – |
| 12 | ಸರ್ಕಾರದಿಂದ ಲೆಕ್ಕ ಪರಿಶೋಧನೆ | – | – |
| 13 | ನಿಬಂಧಕರಿಂದ ವಿಚಾರಣೆ | – | ಇದೆ |
| 14 | ಚುನಾವಣೆ ಮುಂದೂಡಿಕೆ | – | – |
| 15 | ಆಯ್ದ ಸಂಘಗಳಿಗೆ ಕಾನೂನು ತಿದ್ದುಪಡಿ | – | – |
| 16 | ಸಿಬ್ಬಂದಿ ಬಗ್ಗೆ ನಿಬಂಧಕರ ಅನುಮತಿ | – | – |
| 17 | ಲಾಭಾಂಶಕ್ಕ ಅಲ್ಪ ಮಿತಿ | – | – |
| 18 | ಸಾಲಕ್ಕೆಮಿತಿ | – | – |
| 19 | ಪಾಲುಗಾರಿಕೆ ಇತ್ಯಾದಿಗೆ ಅವಕಾಶ | ಇದೆ | ಇದೆ |

● ಈ ಅಧಿಕಾರ ಸಂಯುಕ್ತ ಸಹಕಾರಿಗೆ ಇದೆ; ನಿಬಂಧಕರಿಗೆ ಇಲ್ಲ

ಮೇಲಿನ ಹೋಲಿಕೆಗಳನ್ನು ಗಮನಿಸಿದಾಗ ಒಂದು ಅಂಶ ನಮಗೆ ಸ್ಪಷ್ಟವಾಗುತ್ತದೆ; ಅದೆಂದರೆ ಮೂಲ ಕಾಯಿದೆಯಲ್ಲಿ ಕೆಲವು ವರ್ಷಗಳ ಹಿಂದೆ ಮತ್ತು ಸುಮಾರು ಮೂರು ದಶಕಗಳ ಕಾಲ ಇದ್ದ ಬಹಳಷ್ಟು ನಿರ್ಬಂಧೀಯ ಅವಕಾಶಗಳು 1959 ರಲ್ಲಿ ಇರಲಿಲ್ಲ ಎಂದು.ಾದರೆ 1992ರಲ್ಲಿ ಎಲ್ಲವೂ ಇದ್ದವು ಎಂದು. ಸಹಕಾರಿ ಕಾಯಿದೆಯನ್ನು ಅಭ್ಯಸಿಸುತ್ತಿರುವ ಎಲ್ಲರೂ – – ವಿಶೇಷವಾಗಿ ಸಹಕಾರಿಗಳು, ಇಲಾಖಾ ಅಧಿಕಾರಿಗಳು, ಸಂಘಗಳಲ್ಲಿ ಆಡಳಿತ ನಿರ್ವಹಣೆಯ ಹಂತದಲ್ಲಿರುವ ನೌಕರರು, ಮುಂತಾದವರು – – ವಿಶೇಷವಾಗಿ ಗಮನಿಸಬೇಕಾದ ಅಂಶ ಇದು.

ಹಾಗಾದರೆ 2011ರಲ್ಲಿ ಈಗ ಇರುವ ಸೌಹಾರ್ದ ಕಾಯಿದೆಯು 1959ರಲ್ಲಿ ಇದ್ದ ಮೂಲ ಕಾಯಿದೆಗೆ ಸಮೀಪವಾಗಿದೆಯೇ?! ಸಮೀಪವಾಗಿದ್ದಲ್ಲಿ ಎಷ್ಟು ಸಮೀಪವಾಗಿದೆ? ಆದ್ದರಿಂದ 1959 ರಲ್ಲಿ ಇದ್ದ ಮೂಲ ಕಾಯಿದೆಯನ್ನು ಇಂದಿನ ಸೌಹಾರ್ದ ಕಾಯಿದೆಗೆ ಹೋಲಿಸುವುದು ಒಂದು ಆಸಕ್ತಿಕರವಾದ ಅಧ್ಯಯನವಾಗುತ್ತದೆ. ನಾನು ಮೇಲೆ ಪಟ್ಟಿಯಲ್ಲಿ ತೋರಿಸಿರುವ 19 ಅಂಶಗಳಲ್ಲಿ ಈಗ – ಎಂದರೆ 2011 ರಲ್ಲಿ – ಕೇವಲ 9 ಅಂಶಗಳು ಮೂಲಕಾಯಿದೆಯಲ್ಲೂ ಮತ್ತು ಕೇವಲ 3 ಅಂಶಗಳು ಸೌಹಾರ್ದ ಕಾಯಿದೆಯಲ್ಲೂ ಇವೆ. ಸಂಖ್ಯೆ 8 ಮತ್ತ 9 ರಲ್ಲಿ ಕೊಟ್ಟಿರುವ ವೀಟೋ ಮುಂತಾದ ಅಧಿಕಾರಗಳು ಬಾರತದ ಇತರ ಅನೇಕ ರಾಜ್ಯಗಳಲ್ಲಿ ಇದ್ದರೂ ಕರ್ನಾಟಕದ ಸಹಕಾರಿ ಕಾನೂನಿನಲ್ಲಿ ಎಂದೂ ಇರಲಿಲ್ಲ. ಕರ್ನಾಟಕದಲ್ಲಿ ಸರ್ಕಾರದ ಹಸ್ತಕ್ಷೇಪ ಎಂಬುದು ಅತಿರೇಕಕ್ಕೆ ಹೋಗಿರಲಿಲ್ಲ ಎಂಬುದನ್ನು ಗಮನಿಸುವ ಸಲುವಾಗಿ ಈ ಅಂಶಗಳತ್ತ ಓದುಗರ ಗಮನ ಸೆಳೆದಿದ್ದೇನೆ. ಕರ್ನಾಟಕದಲ್ಲಿ ವ್ಯಾಪಕವಾಗಿ ಬಳಸಲ್ಪಟ್ಟು ಸಹಕಾರಿಗಳ ಆಕ್ರೋಶ, ಆಗ್ರಹಗಳಿಗೆ ತುತ್ತಾದ ಅವಕಾಶವೆಂದರೆ ಚುನಾವಣೆ ಮುಂದೂಡಿಕೆಗೆ ಸಂಬಂಧಿಸಿದಂತೆ ಉಪಯೋಗಿಸಲ್ಪಡುತ್ತಿದ್ದ ( ಸೆಕ್ಷನ್ 121 ಎಂಬ) ಅವಕಾಶ. ಹಾಗೆ ನೋಡಿದರೆ ಚುನಾವಣೆ ಮುಂದೂಡಿಕೆಗೆ ಮೂಲ ಕಾಯಿದೆಯಲ್ಲಿ ಯಾವತ್ತೂ ಅವಕಾಶವೇ ಇಲ್ಲ. ಅಸಾಧಾರಣ ಪ್ರಸಂಗಗಳಲ್ಲಿ ಕಾನೂನಿನ ಬಿಕ್ಕಟ್ಟುಗಳನ್ನು ಪರಿಹರಿಸಲು ಇರುವ ಒಂದು ಅವಕಾಶವನ್ನು ದುರುಪಯೋಗಪಡಿಸಿಕೊಂಡು ಚುನಾವಣೆ ಮುಂದೂಡಿಕೆಗೆ ಬಳಸಲಾಗುತ್ತಿದೆಯಷ್ಟೆ. ಇದು ತರಕಾರಿ ಹೆಚ್ಚಲೆಂದು ಇರುವ ಚಾಕುವನ್ನು ಹಲ್ಲೆ, ಕೊಲೆಗಳಿಗೆ ಬಳಸಿದಂತೆ.

ಈ ಸರ್ಕಾರದ ಹತೋಟಿ ಎಂಬುದು ತೀರಾ ಅತಿರೇಕಕ್ಕೆ ಹೋದುದು ತಮಿಳುನಾಡಿನಲ್ಲಿ. ಅಲ್ಲಿ ಸರ್ಕಾರವು ವಿಶೇಷ ಕಾನೂನು ಹೊರಡಿಸಿ ಎಲ್ಲ ಸಹಕಾರ ಸಂಘಗಳನ್ನೂ ಸಾರಾ ಸಗಟಾಗಿ ತನ್ನ ವಶಕ್ಕೆ ತೆಗೆದುಕೊಂಡಿತು.; ಮಾತ್ರವಲ್ಲದೆ ದಶಕಗಳ ಕಾಲ ಚುನಾವಣೆ ನಡೆಸದೆ ತನ್ನ ವಶದಲ್ಲೇ ಇಟ್ಟುಕೊಂಡಿತು. ಸಹಕಾರಿ ಕ್ಷೇತ್ರದಲ್ಲಿ ಚುನಾವಣೆ ನಡೆಯುವುದು ಮತ್ತು ಪ್ರಜಾಸತ್ತಾತ್ಮಕ ಹತೋಟಿ ಇರುವುದು ಬಹಳ ಅಪರೂಪ ಎನ್ನುವಂತಹ ಪರಿಸ್ಥಿತಿ ತಮಿಳುನಾಡಿನಲ್ಲಿ ಇಂದಿಗೂ ಇದೆ. ಇಲ್ಲಿ ಒಂದು ಸ್ವಾರಸ್ಯಕರವಾದ ಅಂಶವೆಂದರೆ ಹತ್ತಾರು ವರ್ಷದ ಕಾಲದ ಸರ್ಕಾರದ ಹಸ್ತಕ್ಷೇಪವು ಸಂಘಗಳ ಚಟುವಟಿಕೆಗಳ ಮೇಲಾಗಲೀ ಅಥವಾ ಅವುಗಳ ಆರ್ಥಿಕ ಪರಿಸ್ಥಿತಿಯ ಮೇಲಾಗಲೀ ಅಥವಾ ಲಾಭದಾಯಕತೆಯ ಮೇಲಾಗಲೀ ಯಾವುದೇ ವಿಶೇಷ ಪರಿಣಾಮ ಉಂಟುಮಾಡಿದಂತೆ ಕಾಣುವುದಿಲ್ಲ. ಇದನ್ನು ನಾನು ನನ್ನ ಹಿಂದಿನ ಕೆಲವು ಲೇಖನಗಳಲ್ಲಿ ವಿಸ್ತಾರವಾಗಿ ವಿವರಿಸಿದ್ದೇನೆ. ಇದರಿಂದ ಒಂದು ಮುಖ್ಯ ಅಂಶ ಹೊರಹೊಮ್ಮುತ್ತದೆ – ಪ್ರಜಾಪ್ರಭುತ್ವದ ಆಡಳಿತ ಇಲ್ಲದಿದ್ದರೆ ಸಂಘಗಳ ಆರ್ಥಿಕ ಪರಿಸ್ಥಿಯ ಮೇಲಾಗಲೀ ಅಥವಾ ಸದಸ್ಯರಿಗೆ ದೊರಕುವ ಸೌಲಭ್ಯಗಳ ಮೇಲಾಗಲೀ ಪ್ರತಿಕೂಲ ಪರಿಣಾಮ ಉಂಟು ಮಾಡದಿದ್ದರೆ ಸಹಕಾರಿ ಸಂಘಗಳಲ್ಲಿ ಪ್ರಜಾಪ್ರಭುತ್ವದ ಹೆಗ್ಗಳಿಕೆ ಏನು? ಇದೂ ಒಂದು ವಿಚಾರಣೀಯ ಅಂಶ ಅಲ್ಲವೇ ?

**ಈ ಹೋಲಿಕೆಯಿಂದ ನಮಗೆ ಒಂದು ಚಿತ್ರ ಕಾಣಸಿಗುತ್ತದೆ :**

2011 ರಲ್ಲಿ ಇರುವ ಸೌಹಾರ್ದ ಕಾಯಿದೆಗೂ 1959ರಲ್ಲಿ ಇದ್ದ ಮೂಲ ಕಾಯಿದೆಗೂ ಸಾಮ್ಯಗಳು ಜಾಸ್ತಿ ಇವೆ ಮತ್ತು ವ್ಯತ್ಯಾಸಗಳು ಕಡಿಮೆ ಇವೆ. ವ್ಯತ್ಯಾಸಗಳನ್ನೇ ನೋಡಿದಾಗ ಮೇಲೆ ಕಾಣಿಸಿದ ವ್ಯತ್ಯಾಸಗಳು ಮಾತ್ರವಲ್ಲದೆ, ಬೇರೆ ಒಂದು ಅತ್ಯಂತ ಪ್ರಮುಖ ವ್ಯತ್ಯಾಸ ಇವೆರಡೂ ಕಾಯಿದೆಗಳ ನಡುವೆ ಇದೆ. ಆದರೆ ಅದನ್ನು ನಾನು ಮೇಲೆ ಕಾಣಿಸಿಲ್ಲ. ಏಕೆಂದರೆ ಅದು ಸರ್ಕಾರದ ಹಸ್ತಕ್ಷೇಪಕ್ಕೆ ಸಂಬಂಧಿಸಿದ್ದಲ್ಲ. ಅದು ಸಂಘಗಳ ಲೆಕ್ಕ ತಯಾರಿಕೆಗೆ ಸಂಬಂಧಿಸಿದ ಒಂದು ತಾಂತ್ರಿಕ ವಿಷಯ. ಅದೆಂದರೆ ಮೂಲ ಕಾಯಿದೆಯಡಿಯಲ್ಲಿ ರಚಿಸಿರುವ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು,1960( ಇದನ್ನು ಚಿಕ್ಕದಾಗಿ ನಿಯಮಗಳು ಎನ್ನೋಣ) ಇದರಲ್ಲಿನ ನಿಯಮ 22 ರಲ್ಲಿ ನೀಡಿರುವ ಆದಾಯ ಲೆಕ್ಕಿಸುವ ವಿಧಾನ. ಈ ವಿಧಾನ ಮೂಲಕಾಯಿದೆಯಲ್ಲಿ ಇದೆಯೇ ಹೊರತು ಸೌಹಾರ್ದ ಕಾಯಿದೆಯಲ್ಲಿ ಇಲ್ಲ. ಈ ವಿಧಾನದಲ್ಲಿ ಎಲ್ಲವನ್ನೂ ಮಾಮೂಲಿ ಲೆಕ್ಕಪತ್ರ ಶಾಸ್ತ್ರದ ಪ್ರಕಾರವೇ ನೀಡಿದ್ದರೂ ಸಹ ಮಾಮೂಲಿ ಲೆಕ್ಕಪತ್ರ ಶಾಸ್ತ್ರದ ವಿಧಾನಕ್ಕೆ ಹೋಲಿಸಿದರೆ ಒಂದು ಪ್ರಮುಖ ವ್ಯತ್ಯಾಸವಿದೆ. ಅದೇನು?

ಮುಂದಿನ ಸಂಚಿಕೆಗೆ...



# ಬಯಲಿನಲ್ಲಿ ಪ್ರಯಾಣದ ಗುರಿ

ಎಂ.ಎನ್.ಅಶ್ವತ್ಥ ನಾರಾಯಣ
ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು ಬೆಂಗಳೂರು

## ಸೌಹಾರ್ದ ಕಾಯಿದೆಯ ಪ್ರಸ್ತುತತೆ...

...ಹಿಂದಿನ ಸಂಚಿಕೆಯಿಂದ

*ಸಹಕಾರಿಗಳ ಆಕ್ರೋಶಕ್ಕೆ ಗುರಿಯಾಗಿರುವ ಇಂತಹ ನಿರ್ಬಂಧೀಯ ಅವಕಾಶಗಳನ್ನು ಕೆಳಗೆ ಕಾಣಿಸಿದಂತೆ ಪಟ್ಟಿ ಮಾಡಬಹುದು :*

1. ಸಂಘಗಳ ಉಪನಿಯಮಗಳನ್ನು ನಿಬಂಧಕರೇ ಬದಲಾಯಿಸುವುದು;
2. ಸಂಘಗಳ ಅನುಮತಿ ಇಲ್ಲದೆ ಸಂಘದಲ್ಲಿ ಸದಸ್ಯತ್ವ ಉಂಟಾಗುವುದು;
3. ಸಂಘಗಳನ್ನು ಬಲವಂತವಾಗಿ ವಿಲೀನ /ವಿಭಜನೆ / ಪುನರ್ವಿಂಗಡಣೆ ಮಾಡುವುದು
4. ಸಂಘಗಳ ಆಡಳಿತ ಮಂಡಳಿಗಳನ್ನು ನಿಬಂಧಕರು ಅಂಗೀಕೃತ ವಿಧಾನದ ಮೂಲಕ ಕಿತ್ತುಹಾಕುವುದು;
5. ಸಂಘಗಳ ಆಡಳಿತ ಮಂಡಳಿಗಳ ಸದಸ್ಯರನ್ನು ನಿಬಂಧಕರು ಅಂಗೀಕೃತ ವಿಧಾನದ ಮೂಲಕ ಅನರ್ಹಗೊಳಿಸುವುದು/ತೆಗೆದುಹಾಕುವುದು;
6. ಸಂಘಗಳ ಆಡಳಿತಮಂಡಳಿಗಳನ್ನು ಸರ್ಕಾರವು ನೋಟೀಸ್ ನೀಡದೆ ತೆಗೆದು ಹಾಕುವುದು;
7. ಸಂಘಗಳ ಆಡಳಿತ ಮಂಡಳಿಗಳಲ್ಲಿ ಒಟ್ಟು ಸಂಖ್ಯೆಯ 1/3 ರಷ್ಟು ಸದಸ್ಯರನ್ನು ಸರ್ಕಾರ ನೇಮಿಸುವುದು;
8. ಸರ್ಕಾರದ ಪ್ರತಿನಿಧಿಗಳಿಗೆ ವೀಟೋ ಅಧಿಕಾರ;
9. ಸಂಘಗಳ ಆಡಳಿತ ಮಂಡಳಿ ನಿರ್ಣಯಗಳನ್ನು ನಿಬಂಧಕರು ತಡೆಹಿಡಿಯುವುದು/ಅನೂರ್ಜಿತಗೊಳಿಸುವುದು;
10. ಸಂಘಗಳಿಗೆ ಅವುಗಳ ಆಡಳಿತ / ಆರ್ಥಿಕ ವ್ಯವಹಾರ ಮುಂತಾದುವುಗಳ ಬಗ್ಗೆ ನಿರ್ದೇಶನ ನೀಡುವುದು;
11. ಸಂಘಗಳ ಆಡಳಿತವನ್ನು ಭಾಗಶ: ಸ್ವಾಧೀನಕ್ಕೆ ತೆಗೆದುಕೊಳ್ಳುವುದು;
12. ಸರ್ಕಾರದಿಂದ ಲೆಕ್ಕ ಪರಿಶೋಧನೆ;
13. ಸರ್ಕಾರದಿಂದ ವಿಚಾರಣೆ / ಪರಿವೀಕ್ಷಣೆ;
14. ಸಂಘಗಳ ಆಡಳಿತ ಮಂಡಳಿಗಳಿಗೆ ಚುನಾವಣೆಗಳನ್ನು ಬೇಕಾಬಿಟ್ಟಿ ಮುಂದೂಡುವುದು;
15. ರಾಜಕೀಯ ಕಾರಣಕ್ಕಾಗಿ ಕೆಲವು ಆಯ್ದ ಸಂಘಗಳಿಗಾಗಿಯೇ ಪ್ರತ್ಯೇಕವಾಗಿ ಕಾಯಿದೆ ತಿದ್ದುಪಡಿ ಮಾಡುವುದು;
16. ಸಿಬ್ಬಂದಿ ನೇಮಕಮಾಡುವುದು / ಸಂಬಳ ಇತ್ಯಾದಿ ನಿಗದಿಮಾಡುವುದು ಮುಂತಾದುವುಗಳಿಗೆ ನಿಬಂಧಕರ ಅನುಮತಿ ಕಡ್ಡಾಯವಾಗಿರುವುದು
17. ಹೆಚ್ಚಿನ ದರದಲ್ಲಿ ಲಾಭಾಂಶ ನೀಡಲು ನಿರ್ಬಂಧ;
18. ಸಾಲಗಳನ್ನು ತರಲು ಮಿತಿಗಳು;
19. ಸಹಕಾರಕ್ಷೇತ್ರದ ಹೊರಗೆ ಪಾಲುಗಾರಿಕೆ, ಇತ್ಯಾದಿಗಳಿಗೆ ನಿರ್ಬಂಧ; ಇತ್ಯಾದಿಗಳು.

ಈ ಮೇಲೆ ಕಾಣಿಸಿದ ಅಂಶಗಳೇ ಸಹಕಾರಿ ಕಾಯಿದೆಯಲ್ಲಿ ಕಳೆದ 50 ವರ್ಷಗಳಲ್ಲಿ ಬದಲಾವಣೆಗಳಿಗೆ ಗುರಿಯಾಗಿರುವ ಅಂಶಗಳು ಎಂಬುದನ್ನು ಗಮನಿಸಬಹುದು. ಇನ್ನೊಂದು ಪ್ರಮುಖ ಅಂಶವೆಂದರೆ ಬದಲಾವಣೆಗಳು ಆಗದೆ ಮೂಲಕಾಯಿದೆಯಲ್ಲಿ ಉಳಿದಿಕೊಂಡಿರುವ ಅಂಶಗಳಲ್ಲಿ ಬಹುಪಾಲು ಸೌಹಾರ್ದ ಕಾಯಿದೆ ಯಲ್ಲೂ ಇವೆ ಎಂಬುದು.

ಇದು ಮೂಲ ಕಾಯಿದೆಯ ವಿಷಯವಾಯಿತು. ಈಗ ಸೌಹಾರ್ದ ಕಾಯಿದಗೆ ಸಂಬಂಧಿಸಿದ ಒಂದು ಅಂಶವನ್ನು ಗಮನಿಸೋಣ. ಅದೆಂದರೆ ಸೌಹಾರ್ದ ಕಾಯಿದೆ ಕೂಡ 2001 ರಲ್ಲಿ ಜಾರಿಗೆ ಬಂದಿದ್ದ ರೀತಿಯಲ್ಲಿ ಈಗ, ಎಂದರೆ 2011ರಲ್ಲಿ, ಇಲ್ಲ ಎಂದು. ಅದಲ್ಲದೆ ಸೌಹಾರ್ದ ಕಾಯಿದೆಯನ್ನು ದೇಶದ ಇತರ ಸಮಾನಾಂತರ ಕಾಯಿದೆಗಳಿಗೆ ಹೋಲಿಸಿದರೆ ದೇಶದ ಇತರ ಸಮಾನಾಂತರ ಕಾಯಿದೆಗಳಲ್ಲಿ ಇಲ್ಲದ ಒಂದು ವೈಶಿಷ್ಟ್ಯ ಕರ್ನಾಟಕದ ಈ ಸೌಹಾರ್ದ ಕಾಯಿದೆಯಲ್ಲಿ ಇದೆ. ಅದೆಂದರೆ ಎಲ್ಲ ಸೌಹಾರ್ದ ಸಹಕಾರಿಗಳ ಒಕ್ಕೂಟ. ಇದಕ್ಕೆ ಸಂಯುಕ್ತ ಸಹಕಾರಿ ಎಂದು ಕರೆಯಲಾಗಿದೆ. ಅಷ್ಟು ಮಾತ್ರವಲ್ಲದೆ, ಅದಕ್ಕೆ ಮೂಲ ಕಾಯಿದೆಯಲ್ಲಿ ನಿಬಂಧಕರಿಗೆ ಇದ್ದ ಕೆಲವು ಅಧಿಕಾರಗಳನ್ನು ಕೊಡಲಾಗಿದೆ. ತನ್ನ ಸದಸ್ಯಸಂಘಗಳಿಗೆ ಸಂಬಂಧಿಸಿದಂತೆ ಅನೇಕ ಹೊಣೆಗಾರಿಕೆಗಳನ್ನೂ ನೀಡಲಾಗಿದೆ. ಇದರ ಪ್ರಭಾವ ಎಷ್ಟಾಗಿದೆ ಎಂದರೆ ಈಚೆಗೆ ನೋಂದಣಿಯಾದ ಒಂದು ಸೌಹಾರ್ದ ಸಹಕಾರಿಯು ಸಂಯುಕ್ತ ಸಹಕಾರಿಯಿಂದ ಶಿಸ್ತು ಪರಿಪಾಲನೆಗೆ ಒಳಗಾದ ಸಂಘ ಎಂದು ತನ್ನನ್ನು ತಾನೇ ಅಂತರ್ಜಾಲದಲ್ಲಿ ಬಣ್ಣಿಸಿಕೊಂಡಿದೆ. ಆದರೆ ಮಾದರಿ ಕಾಯಿದೆಯ ಪರಿಕಲ್ಪನೆ ಇರುವುದು ಸಂಘಗಳು ಸಂಪೂರ್ಣವಾಗಿ ಸ್ವಾಯತ್ತವಾಗಿರಬೇಕು ಎಂದು. ಆದ್ದರಿಂದ ಕರ್ನಾಟಕದ ಸಮಾನಾಂತರ ಕಾಯಿದೆಯಾದ ಸೌಹಾರ್ದ ಕಾಯಿದೆಯು ಮಾದರಿ ಕಾಯಿದೆಯಷ್ಟು ಉದಾರ ಕಾಯಿದೆ ಅಲ್ಲ.

ಇದೆಲ್ಲವನ್ನೂ ಗಮನಿಸಿದಾಗ ಮೂಲ ಕಾಯಿದೆಯಲ್ಲಿ ಮೊದಲಿಂದಲೂ ಉಳಿದುಕೊಂಡು ಬಂದಿರುವಂತಹ – ಬಹುಶ: ಅಸ್ಥಿಪಂಜರದಂತೆ ಇರುವ – ಕೆಲವು

2011ರಲ್ಲಿ ಈಗ ಇರುವ ಸೌಹಾರ್ದ ಕಾಯಿದೆಯು 1959ರಲ್ಲಿ ಇದ್ದ ಮೂಲ ಕಾಯಿದೆಗೆ ಸಮೀಪವಾಗಿದೆಯೇ?! ಸಮೀಪವಾಗಿದ್ದಲ್ಲಿ ಎಷ್ಟು ಸಮೀಪವಾಗಿದೆ? ಆದ್ದರಿಂದ 1959 ರಲ್ಲಿ ಇದ್ದ ಮೂಲ ಕಾಯಿದೆಯನ್ನು ಇಂದಿನ ಸೌಹಾರ್ದ ಕಾಯಿದೆಗೆ ಹೋಲಿಸುವುದು ಒಂದು ಆಸಕ್ತಿಕರವಾದ ಅಧ್ಯಯನವಾಗುತ್ತದೆ. ನಾನು ಮೇಲೆ ಪಟ್ಟಿಯಲ್ಲಿ ತೋರಿಸಿರುವ 19 ಅಂಶಗಳಲ್ಲಿ ಈಗ – ಎಂದರೆ 2011 ರಲ್ಲಿ – ಕೇವಲ 9 ಅಂಶಗಳು ಮೂಲಕಾಯಿದೆಯಲ್ಲೂ ಮತ್ತು ಕೇವಲ 3 ಅಂಶಗಳು ಸೌಹಾರ್ದ ಕಾಯಿದೆಯಲ್ಲೂ ಇವೆ. ಸಂಖ್ಯೆ 8 ಮತ್ತ 9 ರಲ್ಲಿ ಕೊಟ್ಟಿರುವ ವೀಟೋ ಮುಂತಾದ ಅಧಿಕಾರಗಳು ಬಾರತದ ಇತರ ಅನೇಕ ರಾಜ್ಯಗಳಲ್ಲಿ ಇದ್ದರೂ ಕರ್ನಾಟಕದ ಸಹಕಾರಿ ಕಾನೂನಿನಲ್ಲಿ ಎಂದೂ ಇರಲಿಲ್ಲ. ಕರ್ನಾಟಕದಲ್ಲಿ ಸರ್ಕಾರದ ಹಸ್ತಕ್ಷೇಪ ಎಂಬುದು ಅತಿರೇಕಕ್ಕೆ ಹೋಗಿರಲಿಲ್ಲ ಎಂಬುದನ್ನು ಗಮನಿಸುವ ಸಲುವಾಗಿ ಈ ಅಂಶಗಳತ್ತ ಓದುಗರ ಗಮನ ಸೆಳೆದಿದ್ದೇನೆ.

# ಮಯೂರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವನಲ್ಲಿ "ಕುಟುಂಬ ಮಿಲನ" ಕಾರ್ಯಕ್ರಮ

ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ಮಯೂರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್‌ನಲ್ಲಿ ಸದಸ್ಯರಿಗೆ ವಿನೂತನ ಕಾರ್ಯಕ್ರಮ "ಕುಟುಂಬ ಮಿಲನ" ಏರ್ಪಡಿಸ ಲಾಗಿತ್ತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಆರ್.ಎಸ್.ಎಸ್.ನ ಹಿರಿಯ ಪ್ರಚಾರಕರಾದ ಶ್ರೀ ಎಸ್.ಸುಬ್ಬಣ್ಣನವರು ಮಾತನಾಡಿ, ಭಾರತೀಯ ಕುಟುಂಬ ವ್ಯವಸ್ಥೆ ಪ್ರಪಂಚಕ್ಕೆ ಮಾದರಿಯಾಗಿರುವ ವ್ಯವಸ್ಥೆಯಾಗಿದೆ. ಈ ವ್ಯವಸ್ಥೆ ಅನಾದಿ ಕಾಲದಿಂದ ನಡೆದು ಬಂದು ಜಗತ್ತಿನ ಇತರೆ ರಾಷ್ಟ್ರಗಳಿಗೆ ಪ್ರೇರಕವೂ ಆಗಿದೆ ಇಂತಹ ವ್ಯವಸ್ಥೆ ಯಾವುದೆ ಕಾರಣಕ್ಕೂ ಶಿಥಿಲ ಗೊಳ್ಳಬಾರದು. ಅದನ್ನು ಭದ್ರಪಡಿಸಲು ಇಂತಹ ಕಾರ್ಯ ಕ್ರಮಗಳನ್ನು ಆಗಿಂದಾಗ್ಗೆ ಹಮ್ಮಿಕೊಳ್ಳಬೇಕು ಎಂದರು.

ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್. ಸತೀಶಚಂದ್ರರವರು ಮಾತನಾಡಿ, ಸನಾತನ ಸಂಸ್ಕೃತಿಯ ಭದ್ರ ನೆಲೆಗಟ್ಟಿನಲ್ಲಿ ನಮ್ಮ ದೇಶ ಬೆಳೆದುಬಂದಿದೆ. ಇಂತಹ ವ್ಯವಸ್ಥೆಯನ್ನು ಬಲಗೊಳಿಸುವ ನಿಟ್ಟಿನಲ್ಲಿ ಮಯೂರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಹಮ್ಮಿಕೊಂಡಿರುವ ಈ ಕುಟುಂಬ ಮಿಲನ ಕಾರ್ಯಕ್ರಮ ಶ್ಲಾಘನೀಯ ಹಾಗೂ ಇತರರಿಗೆ ಮಾದರಿ ಹಾಗೂ ಈ ಮೂಲಕ ಸೌಹಾರ್ದ ಸಹಕಾರಿಯ ಚಟುವಟಿಕೆಗಳು ಬಲಗೊಳ್ಳಲು ಸಾಧ್ಯ ಎಂದು ತಿಳಿಸಿದರು.



ಮಯೂರ ಸೇವಾ ಪ್ರತಿಷ್ಠಾನ ಹಾಗೂ ಮಯೂರ ಸೌಹಾದ್ ಕ್ರೆಡಿಟ್ ಕೋ–ಆಪರೇಟಿವ್ ಅಧ್ಯಕ್ಷ ಶ್ರೀ ಎಂ.ಎಸ್.ವೆಂಕಟೇಶ್ ಮಾತನಾಡಿ ಧರ್ಮ, ಅರ್ಥ ಹಾಗೂ ಕಾಮಗಳ ಸರಿಯಾದ ಅರ್ಥಮಾಡಿಕೊಂಡು ಆಚರಣೆಯಲ್ಲಿ ತಂದದ್ದಾದರೆ ಕುಟುಂಬ ವ್ಯವಸ್ಥೆ ಉತ್ತಮವಾಗಿರುತ್ತದೆ. ಕುಟುಂಬದ ವ್ಯಕ್ತಿಗಳು ಉತ್ತಮ ವ್ಯಕ್ತಿತ್ವವನ್ನು ಹೊಂದಿ ಉತ್ತಮ ವಾತಾವರಣ ನಿರ್ಮಾಣಕ್ಕೆ ಅವಕಾಶವಾಗುತ್ತದೆ ಮಾದರಿ ಕುಟುಂಬ ಹಾಗೂ ಮಾದರಿ ಸಮಾಜ ವ್ಯವಸ್ಥೆ ನಿರ್ಮಾಣ ಸಾಧ್ಯ ಎಂದರು. ಕು.ರಮ್ಯಾ ಪ್ರಾರ್ಥಿಸಿ, ಎಮ್.ಎಸ್. ವೆಂಕಟೇಶ್ ಸ್ವಾಗತಿಸಿ, ಎಮ್.ಎನ್.ಚಂದ್ರಶೇಖರ ವಂದಿಸಿ, ರಾಜೇಂದ್ರ ಪೈ ಕಾರ್ಯಕ್ರಮ ನಿರೂಪಣೆ ನೇರವೇರಿಸಿದರು.

## ಇ– ಸ್ಟಾಂಪಿಂಗ್ ಸೇವೆ ಆರಂಭ



ತುಮಕೂರು ಜಿಲ್ಲೆಯ ಪಾವಗಡದಲ್ಲಿ ಶ್ರೀ ಮಾತಾ ವಿವಿಧೋದ್ದೇಶ ಪತ್ತಿನ ಸೌಹಾದ್ ಸಹಕಾರಿ ನಿ ದವರು ದಿನಾಂಕ 11/7/2011 ರಂದು ಇ–ಸ್ಟಾಂಪಿಂಗ್ ಸೇವೆಯನ್ನು ಪ್ರಾರಂಭಿಸಿದರು. ಈ ಕಾರ್ಯಕ್ರಮದ ಪ್ರಾರಂಭೋತ್ಸವವನ್ನು ಸಹಕಾರಿಯ ಅಧ್ಯಕ್ಷರಾದ ಶ್ರಿ ಬಿ.ಬಿ.ರಾಧಾಕೃಷ್ಣ ರವರು ನೆರವೇರಿಸಿದರು.



ರಾಯಚೂರಿನ ದೇವದುರ್ಗದ ಶ್ರೀ ಸಾಯಿಬಾಬಾ ವಿವಿಧೋದ್ದೇಶ ಸೌಹಾರ್ದ ಸಹಕಾರಿಯಲ್ಲಿ ಇ–ಸ್ಟಾಂಪಿಂಗ್ ವ್ಯವಹಾರವನ್ನು ಹಿರಿಯ ಸಹಕಾರಿ ಹಾಗೂ ವಕೀಲ ಶ್ರೀ ಡಿ.ಸಿ.ಪಾಟೀಲ್ ನೆವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಶರಣಗೌಡ ಕಮತಗಿ ವಹಿಸಿದ್ದರು. ಶ್ರೀ ಸಿದ್ದರಾಮರೆಡ್ಡಿ ಕಮತಗಿ, ನಿರ್ದೇಶಕರಾದ ಶ್ರೀ ಭೀಮನಗೌಡ ಅಂಜಳ, ಮಲ್ಲನಗೌಡ ವಕೀಲರು, ಮಹಾದೇವ ಪಾಟೀಲ್ ಬಸನಗೌಡ ಗಿರಡ್ಡಿ ವೆಂಕಟಾಪುರ, ಬಸವರಾಜ ಬಾಗೂರು ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಭದ್ರಾವತಿ ವಿಶ್ವೇಶ್ವರಯ್ಯ ವಿವಿಧೋದ್ದೇಶ ಸೌಹಾರ್ದ ಸಹಕಾರಿಗೆ ಆಯ್ಕೆ



ಸಿದ್ದಲಿಂಗಯ್ಯ
ಅಧ್ಯಕ್ಷರಾಗಿ

ವಿಶ್ವೇಶ್ವರಯ್ಯ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಭದ್ರಾವತಿ, ಶಿವಮೊಗ್ಗ ಜಿಲ್ಲೆ ಈ ಸಹಕಾರಿಯ ಅಧ್ಯಕ್ಷರಾಗಿ ಶ್ರೀ ಸಿದ್ಧಲಿಂಗಯ್ಯ ಉಪಾಧ್ಯಕ್ಷರಾಗಿ ಶ್ರೀ ಜಿ. ಡಿ. ನಟರಾಜ, ನಿರ್ದೇಶಕರುಗಳಾಗಿ ಶ್ರೀ ಎಮ್. ರಾಮಚಂದ್ರ, ಶ್ರೀ ಎಲ್. ಆರ್. ವಿನೋದಕುಮಾರ, ಶ್ರೀ ಎಸ್.ರಾಜೇಂದ್ರ, ಶ್ರೀ ಎ. ಎಸ್. ಕುಮಾರ, ಶ್ರೀ ಎಸ್. ವಾಗೀಶ್, ಶ್ರೀ ಪರಶುರಾಮಾರಾವ್, ಶ್ರೀ ಸಿ. ಆರ್. ಶಿವರಾಮ, ಶ್ರೀ ದಿನೇಶ, ಶ್ರೀ ಬಾಲಾಜಿ ಬಿ. ಟಿ., ಶ್ರೀ ಕುಮಾರ. ಜಿ., ಶ್ರೀ ಎಮ್. ಪಿ. ಉಮೇಶ ಆಯ್ಕೆಯಾಗಿದ್ದಾರೆಂದು ಸಹಕಾರಿಯ ಪ್ರಕಟಣೆಯಲ್ಲಿ ಕಾರ್ಯದರ್ಶಿ ಎಸ್. ಪೂರ್ಣಿಮಾರವರು ತಿಳಿಸಿದ್ದಾರೆ.



ಜಿ. ಡಿ. ನಟರಾಜ
ಉಪಾಧ್ಯಕ್ಷರು

# ವಿವಿಧ ಸಹಕಾರಿಗಳಿಗೆ ಅಧ್ಯಕ್ಷರ, ಉಪಾಧ್ಯಕ್ಷರ, ನಿರ್ದೇಶಕರ ಹಾಗೂ ವ್ಯವಸ್ಥಾಪಕ ನಿರ್ದೇಶಕರ ಭೇಟಿ

ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ಶ್ರೀ ಬ್ರಾಹ್ಮಿ ಸೌಹಾರ್ದ ಸಹಕಾರಿಗೆ ಭೇಟಿ ನೀಡಿ ಸೌಹಾರ್ದ ಸಹಕಾರಿಯ ಅಭಿವೃದ್ಧಿಗೆ ಸಲಹೆ ಹಾಗೂ ಮಾರ್ಗದರ್ಶನ ನೀಡಿದರು.

ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರರವರು ಗುಲ್ಬರ್ಗಾ ಹಾಗೂ ಬೀದರ ಜಿಲ್ಲೆಯ ವಿವಿಧ ಸಹಕಾರಿಗಳಿಗೆ ಭೇಟಿ ನೀಡಿ ಕಾರ್ಯಚಟುವಟಿಕೆಗಳ ಪರಿಶೀಲನೆ ಮಾಡಿ ಮಾರ್ಗದರ್ಶನ ಮಾಡಿದರು.

ಗುಲ್ಬರ್ಗಾ ಜಿಲ್ಲಾ ನಿರ್ದೇಶಕ ಶ್ರೀ ಶಾಂತಿನಾಥ ಪಂಡಿತ ಹಾಗೂ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್ ರವರು ಗುಲ್ಬರ್ಗಾದ ವೀರಮಹೇಶ್ವರ (ಜಂಗಮರ) ಪತ್ತಿನ ಸೌಹಾರ್ದ ಸಹಕಾರಿ, ಚಂದ್ರಶೇಖರ ಪಾಟೀಲ್ (ರೇವೂರ) ಪತ್ತಿನ ಸೌಹಾರ್ದ ಸಹಕಾರಿ,ಶರಣ ಮಣಿಕಂಠ ಪತ್ತಿನ ಸೌಹಾರ್ದ ಸಹಕಾರಿ, ಶ್ರೀ ಶಾರದಾಂಬೆ ಸೌಹಾದ್ ಕ್ರೆಡಿಟ್ ಸೌಹಾರ್ದ ಸಹಕಾರಿ, ಶ್ರೀಶರಣಸಾಯಿ ಪತ್ತಿನ ಸೌಹಾರ್ದ ಸಹಕಾರಿ,ನಮ್ಮ ಸೌಹಾರ್ದ ಪತ್ತಿನ ಸೌಹಾರ್ದ ಸಹಕಾರಿ ಉದ್ಭವ ಪತ್ತಿನ ಸೌಹಾರ್ದ ಸಹಕಾರಿ ಗಳಿಗೆ ಭೇಟಿ ನೀಡಿ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿದರು.



ಕುಂದಾಪುರದ ಶ್ರೀ ಬ್ರಾಹ್ಮಿ ಸೌಹಾರ್ದ ಸಹಕಾರಿಗೆ ಕರ್ನಾಟಕ ರಾಜ್ಯ ಸಂಯುಕ್ತ ಸಹಕಾರಿ ನಿಯಮಿತದ ಅಧ್ಯಕ್ಷರಾದ ಶ್ರೀ ಸತೀಶಚಂದ್ರರ ಭೇಟಿ.

# ಎಸ್.ಎಸ್.ಪಾಟೀಲ್‌ರವರಿಗೆ ಸಂಯುಕ್ತ ಸಹಕಾರಿಯ ಸನ್ಮಾನ



ರಾಜ್ಯದಲ್ಲಿ ಅವರು ಸಹಕಾರ ಸಚಿವರಾಗಿದ್ದಾಗ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗಾಗಿ ನೇತೃತ್ವ ವಹಿಸಿ ಶ್ರಮಿಸಿದ ಶ್ರೀ ಎಸ್.ಎಸ್.ಪಾಟೀಲ್‌ರವರಿಗೆ ಸಂಯುಕ್ತ ಸಹಕಾರಿಯ ಪರವಾಗಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್. ಸತೀಶಚಂದ್ರರವರು ಶಾಲುಹೊದಿಸಿ ಹಾರಹಾಕಿ ಫಲತಾಂಬೂಲ ಹಾಗೂ ಸಂಯುಕ್ತ ಸಹಕಾರಿಯ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ಸನ್ಮಾನ ಸಮಯದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಶ್ರೀಮತಿ ಎಚ್.ಸಿ.ನಾಗರತ್ನ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಶ್ರೀ ಪರಶಿವಮೂರ್ತಿ ಉಪಸ್ಥಿತರಿದ್ದರು. ಸಭೆಯಲ್ಲಿ ಭಾಗವಹಿಸಿದ್ದ 100 ಕ್ಕೂ ಹೆಚ್ಚು ಪ್ರತಿನಿಧಿಗಳು ಕರತಾಡನದ ಮೂಲಕ ತಮ್ಮ ಗೌರವದ ಸಂತೋಷ ವ್ಯಕ್ತಪಡಿಸಿದರು

# ಸೌಹಾರ್ದ ಕಾಯಿದೆಯಡಿ ಸಂಯುಕ್ತ ಸಹಕಾರಿ, ನಿಬಂಧಕರು ಮಾಡಬೇಕಾದ ಕೆಲಸ ನಿರ್ವಹಿಸುತ್ತಿದೆಯೇ?



**ಸಿ.ಎನ್. ಪರಶಿವಮೂರ್ತಿ**
ಸಹಕಾರ ಸಂಘಗಳ
ನಿವೃತ್ತ ಅಪರ ನಿಬಂಧಕರು

ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997, ದಿನಾಂಕ 1-1-2001 ರಂದು ಜಾರಿಗೆ ಬಂದಿದೆ. ಈ ಕಾಯಿದೆಯಲ್ಲಿ ನಿಬಂಧಕರು ನಿರ್ವಹಿಸಬೇಕಾದ ಬಹಳಷ್ಟು ಅಧಿಕಾರಗಳನ್ನು ಸಂಯುಕ್ತ ಸಹಕಾರಿಗೆ ವರ್ಗಾಯಿಸಿದೆ. ಈಗ ನಿಬಂಧಕರಿಗೆ ಇರುವ ಅಧಿಕಾರಗಳು ಈ ಕೆಳಕಂಡಂತೆ ಇದೆ.

1. ಸಹಕಾರಿಯ ನೋಂದಣಿ.
2. ಉಪನಿಯಮಗಳ ತಿದ್ದುಪಡಿ ನೋಂದಣಿ.
3. ಚುನಾವಣಾಧಿಕಾರಿ ನೇಮಿಸಿ ಆಡಳಿತ ಮಂಡಳಿಗಳ ರಚನೆ.
4. ಸಹಕಾರಿಗಳ ಕಾರ್ಯನಿರ್ವಹಣೆ ಬಗ್ಗೆ ವಿಚಾರಣೆ ನಡೆಸುವುದು
5. ವಿವಾದಗಳ ಇತ್ಯರ್ಥ
6. ಸಹಕಾರಿಗಳ ಸಮಾಪನೆ

ಸಂಯುಕ್ತ ಸಹಕಾರಿಗೆ ಕಲಂ 53(7)ರನ್ವಯ ಮಾಡಬೇಕಾದ ಕೆಲಸ ಪಟ್ಟಿ ಮಾಡಿದೆ. ಅದು ಈ ಕೆಳಕಂಡಂತೆ ಇದೆ.

ಕಲಂ 53(7)

(ಎ) ಸಹಕಾರಿಗಳನ್ನು ಪ್ರವರ್ತಿಸುವುದು ಹಾಗೂ ಸಂಘಟಿಸುವುದು ಮತ್ತು ಈ ಉದ್ದೇಶಕ್ಕಾಗಿ ಮಾದರಿ ಉಪನಿಯಮಗಳನ್ನು ರಚಿಸುವುದು ಹಾಗೂ ಸಹಕಾರಿ ತತ್ವಗಳಿಗನುಸಾರವಾಗಿ ಸಹಕಾರಿಗಳಿಗಾಗಿ ವಿವಿಧ ಕಾರ್ಯ ನೀತಿಗಳನ್ನು ರಚಿಸಲು ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸುವುದು.

(ಬಿ) ಸಹಕಾರಿ ತರಬೇತಿ, ಶಿಕ್ಷಣ ಹಾಗೂ ತಿಳುವಳಿಕೆ ನೀಡುವುದು ಮತ್ತು ಸಹಕಾರ ತತ್ವಗಳನ್ನು ಪ್ರಚಾರ ಮಾಡುವುದು.

(ಸಿ) ಸಂಶೋಧನೆ ಹಾಗೂ ಮೌಲ್ಯಮಾಪನವನ್ನು ಕೈಗೊಳ್ಳುವುದು ಮತ್ತು ಸದಸ್ಯ ಸಹಕಾರಿಗಳಿಗಾಗಿ ಯಥಾವೃಷ್ಟಿ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಲು ನೆರವಾಗುವುದು.

(ಡಿ) ಸದಸ್ಯ ಸಹಕಾರಿಗಳ ನಡುವೆ ಸೌಹಾರ್ದ ಸಂಬಂಧವನ್ನು ಕಲ್ಪಿಸುವುದು.

(ಇ) ಕೈಬಿಡಲಾಗಿದೆ.

(ಎಫ್) ಅಗತ್ಯವಿರುವಾಗ ಮಂಡಳಿಯ ಸಭೆಗಲಲ್ಲಿ ಭಾಗವಹಿಸುವುದೂ ಸೇರಿದಂತೆ ಸದಸ್ಯರ ಸಹಕಾರಿಗಳಿಗೆ ವ್ಯವಸ್ಥಾಪನಾ ಅಭಿವೃದ್ಧಿ ಸೇವೆಗಳನ್ನು ಕಲ್ಪಿಸುವುದು.

(ಜಿ) ಸದಸ್ಯ ಸಹಕಾರಿಗಳಿಗಾಗಿ (ನಡತೆ) ನೀತಿ ಸಂಹಿತೆಯನ್ನು ರೂಪಿಸುವುದು.

(ಹೆಚ್) ಸದಸ್ಯ ಸಹಕಾರಿಗಳಿಗಾಗಿ ಆರ್ಥಿಕ ಸಬಲತೆಯ ಮಾನದಂಡಗಳನ್ನು ರೂಪಿಸುವುದು.

(ಐ) ಸದಸ್ಯ ಸಹಕಾರಿಗಳಿಗೆ ಕಾನೂನು ನೆರವು ಹಾಗೂ ಸಲಹೆ ಒದಗಿಸುವುದು.

(ಜೆ) ಸದಸ್ಯ ಸಹಕಾರಿಗಳ ಅಗತ್ಯದ ಮೇರೆಗೆ ಯಾವುದೇ ಇತರ ಸೇವೆಗಳನ್ನು ಒದಗಿಸುವುದು.

(ಕೆ) ಹೊಸ ರೂಪದ ಸಹಕಾರಿ ಉದ್ದಿಮೆಗಳನ್ನು ಉತ್ತೇಜಿಸುವುದು.

(ಎಲ್) ಸಹಕಾರಿ ಶಿಕ್ಷಣ ನಿಧಿಯನ್ನು ರಚಿಸಿ ನಿರ್ವಹಿಸುವುದು.

(ಎಂ) ಸಹಕಾರಿ ವಿಚಾರಧಾರೆಯನ್ನು ಅನ್ವಯಿಸುವಂಥ ಪ್ರಾಯೋಗಿಕ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು.

(ಎನ್) ಸಹಕಾರಿಗಳ ಪರವಾಗಿ ಮತ್ತು ಸಹಕಾರಿಗಳ ಮಧ್ಯೆ ಪರಸ್ಪರ ಸಂಪರ್ಕ ಕಲ್ಪಿಸುವುದು.

(ಒ) ಸಹಕಾರಿಗಳ ಅಂಕಿ ಅಂಶಗಳ ಬ್ಯಾಂಕಿನಂತೆ ವರ್ತಿಸುವುದು.

(ಪಿ) ಸದಸ್ಯ ಸಹಕಾರಿಗಳ ಹಿತಾಸಕ್ತಿಗಳನ್ನು ಪ್ರತಿನಿಧಿಸುವುದು.

(ಕ್ಯು) ಗೊತ್ತುಪಡಿಸಿದ ಅವಧಿಯೊಳಗಾಗಿ ಅದರ ಸದಸ್ಯ ಸಹಕಾರಿಗಳ ಲೆಕ್ಕಪರಿಶೋಧನೆ, ಚುನಾವಣೆಗಳು, ಸಾಮಾನ್ಯ ಸಭೆಗಳು ನಡೆಯುವುದನ್ನು ಖಚಿತಪಡಿಸಿಕೊಳ್ಳುವುದು.

(ಆರ್) ಸದಸ್ಯ ಸಹಕಾರಿಗಳ ಪರವಾಗಿ ವ್ಯವಹಾರ ಹಾಗೂ ಸೇವೆಗಳನ್ನು ಕೈಗೊಳ್ಳುವುದು.

(ಎಸ್) ಕಲಂ 30ನೇ ಉಪಕಲಂ(2)ರನ್ವಯ ಒಂದು ಸದಸ್ಯ ಸಹಕಾರಿಯು ನಡೆಸಲು ತಪ್ಪಿದ ವಿಶೇಷ ಮಹಾಸಭೆಯನ್ನು ನಡೆಸುವುದು.

(ಟಿ) ಲೆಕ್ಕಪರಿಶೋಧನೆ ಹಾಗೂ ಚಾರ್ಟರ್ಡ್ ಅಕೌಂಟೆಂಟ್ ಒಂದು ಪಟ್ಟಿಯನ್ನು ಸಿದ್ಧಪಡಿಸಿ, ನೇಮಕಾತಿಗಾಗಿ ಅದನ್ನು ಸದಸ್ಯ ಸಹಕಾರಿಗಳಿಗೆ ಕಳುಹಿಸುವುದು.

(ಯು) ಸದಸ್ಯ ಸಹಕಾರಿಗಳ ಪರಿವೀಕ್ಷಣೆಯ ಅಧಿಕಾರ ಹೊಂದಿರುವುದು.

ಪರಂತು, ಒಂದು ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ ಭಾರತೀಯ ರಿಜರ್ವ್ ಬ್ಯಾಂಕಿನ ಅನುಮೋದನೆ ಇದ್ದ ಹೊರತು, ಈ ಉಪ ಕಲಂನಡಿ ಯಾವುದೇ ಕ್ರಮ ಕೈಗೊಳ್ಳತಕ್ಕದ್ದಲ್ಲ.

ಈ ಮೇಲ್ಕಂಡ ಎಲ್ಲಾ ಅಧಿಕಾರಗಳು ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರಡಿ ನಿಬಂಧಕರು ನಿರ್ವಹಿಸುತ್ತಾರೆ.

ಸೌಹಾರ್ದ ಕಾಯಿದೆ 1997ನ್ನು ರಚಿಸಿದ ಉದ್ದೇಶ ಪ್ರಾರಂಭಿಕ ಪದಗಳಲ್ಲಿ ವಿವರಿಸಿದೆ.

"ಸದಸ್ಯರೇ ಸಂಪೂರ್ಣ ಒಡೆತನ ಹೊಮದಿರುವ, ನಿರ್ವಹಿಸುವ ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧಾರಿತವಾದ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ, ಸ್ಪರ್ಧಾತ್ಮಕ, ಸ್ವಾವಲಂಬಿ, ಆರ್ಥಿಕ ಉದ್ಯಮಗಳಾದ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳ ಸ್ವಯಂ ರಚನೆಗೆ ಪ್ರೋತ್ಸಾಹ ನಿಡುವುದು".

ಈ ಮೇಲ್ಕಂಡ ಉದ್ದೇಶ ಗಮನಿಸಿದ ಸದಸ್ಯರೇ ತಮ್ಮ ಸಹಕಾರಿಯನ್ನು ನಡೆಸಿಕೊಂಡು ಹೋಗಬೇಕು. ನಿಬಂಧಕರು ನಿರ್ವಹಿಸುತ್ತಿದ್ದ ಎಲ್ಲಾ ಪ್ರಕಾರ್ಯಗಳನ್ನು ಪ್ರಜಾಪ್ರಭುತ್ವದಡಿ ರಚನೆಯಾದ ಸಂಯುಕ್ತ ಸಹಕಾರಿ ಈ ಅಧಿಕಾರವನ್ನು ನಿರ್ವಹಿಸುವ ಅವಕಾಶವನ್ನು ನಿರ್ವಹಿಸುವ ಶಕ್ತಿ ಇದೆಯೇ ಎಂಬುದನ್ನು ಪರಿಗಣಿಸಬೇಕು.

ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1950ರಡಿ ನಿಬಂಧಕರು, ಈ ಕಾಯಿದೆಯಲ್ಲಿರುವ ಸುಮಾರು 228 ಕಲಂಗಳನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿ ಹೊತ್ತಿದ್ದಾರೆ. ಈ ಕಾಯಿದೆಯಲ್ಲಿ ಸರ್ಕಾರದಿಂದ ಸಹಾಯಧನ ಪಡೆಯುವ ಸಂಸ್ಥೆಗಳಾಗಿದ್ದು, ನಿಬಂಧಕರು ನಿಯಂತ್ರಿಸುವ ಜವಾಬ್ದಾರಿ ಇದೆ. ಸಹಕಾರ ನೀತಿಯನ್ನು ನಿಬಂಧಕರು "ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಿ" ಎಂದು ನಿಗದಿಪಡಿಸಿದ್ದರೂ ರಾಜ್ಯ ಸರ್ಕಾರಗಳ 1959ರ ಕಾಯಿದೆಯಡಿ ಸಹಕಾರಿಗಳ ಮೇಲೆ ಹೆಚ್ಚು ನಿಯಂತ್ರಣ ಹೊಂದಲು ಅವಕಾಶಗಳಿವೆ.

ಅದಕ್ಕಾಗಿಯೇ ಸೌಹಾರ್ದ ಕಾಯಿದೆ 1997ರಲ್ಲಿ ಸರ್ಕಾರದ/ನಿಬಂಧಕರ ಅಧಿಕಾರಗಲನ್ನು ಮೊಟಕುಗೊಳಿಸಿ ಸಹಕಾರಿಗಳೇ ನಿಯಂತ್ರಿಸುವಂತೆ ಕಾಯಿದೆ ರಚಿಸಲಾಗಿದೆ. ನಿಬಂಧಕರ ಕಾರ್ಯವ್ಯಾಪ್ತಿ ಸೀಮಿತವಾಗಿದೆ. ಇದರಿಂದ ನಿಬಂಧಕರ ಸಹಕಾರಿಗಳ ದಿನನಿತ್ಯದ ವ್ಯವಹಾರದಲ್ಲಿ ಮಧ್ಯಪ್ರವೇಶ ಮಾಡಲು ಬರುವುದಿಲ್ಲ. ಈ ಉದ್ದೇಶಕ್ಕಾಗಿಯೇ ಸೌಹಾರ್ದ ಕಾಯಿದೆಯಲ್ಲಿಯೇ ಒಂದು ಪ್ರಾಧಿಕಾರವನ್ನು ಪ್ರಾಜಪ್ರಭುತ್ವದಡಿ ರಚಿಸಲಾಗಿದೆ. ಈ ಸಂಯುಕ್ತ ಸಹಕಾರಿ ಕಲಂ 53(7) ರಲ್ಲಿ ನಮೂದಿಸಿದ ವಿಷಯಗಳಲ್ಲದೇ, ಇತರ ಮಾರ್ಗದರ್ಶನವನ್ನು ದಾರ್ಶನಿಕ, ಸ್ನೇಹಿತ, ಮಾರ್ಗದರ್ಶಿ ಮತ್ತು ತತ್ವಜ್ಞಾನಿಯ ಕೆಲಸ ನಿರ್ವಹಿಸುತ್ತಿದೆ.

ಆದರೆ, ಈ ರೀತಿ ಕರ್ತವ್ಯ, ಪ್ರಕಾರ್ಯ, ಜವಾಬ್ದಾರಿ ನಿರ್ವಹಿಸಲು ಸಂಯುಕ್ತ ಸಹಕಾರಿ ನಿರ್ದೇಶಕರಿಗೆ ಸೂಕ್ತ ತರಬೇತಿ, ಶಿಕ್ಷಣ, ತಿಳುವಳಿಕೆ ಇರುವುದರ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು ಹೇಗೆ? ಸಂಯುಕ್ತ ಸಹಕಾರಿ ಆಗಿಂದಾಗ್ಗೆ ತರಬೇತಿ ವ್ಯವಸ್ಥೆ ಮಾಡುತ್ತಿದೆಯಾದರೂ, ವೈಯಕ್ತಿಕ ಹಿತಾಸಕ್ತಿಗೆ ಅವಕಾಶ ಕೊಡುತ್ತಿಲ್ಲವೆಂದು ದೃಢೀಕರಿಸಿಕೊಳ್ಳುವುದು ಅವಶ್ಯಕ. ಈ ರೀತಿಯಾಗಿ ಪರಾಮರ್ಶಿಸುವಾಗ ನಿಬಂಧಕರಿಗೆ ಯಾವ ರಿತಿ ತರಬೇತಿ ಕೊಡಲಾಗುತ್ತಿದೆ ಎಂಬುದನ್ನು ತಿಳಿಯಬೇಕು. ಸಹಕಾರ ಸಂಘಗಳ ನಿರ್ವಹಣೆಗೆ ಮಾರ್ಗದರ್ಶನ ನೀಡಲು ತಾಲ್ಲೂಕು ಮಟ್ಟದಿಂದ ರಾಜ್ಯ ಮಟ್ಟದವರೆವಿಗೂ ವಿವಿಧ ಶ್ರೇಣಿಯ ನೌಕರರು ಇದ್ದಾರೆ ಮತ್ತು ಅವರನ್ನು ಸೇವೆಗೆ ಸೇರಿದ ನಂತರ ವಿವಿಧ ಕಾಯಿದೆ ಮತ್ತು ನಿಯಮಗಳಡಿ ನಿಯಂತ್ರಿಸಲಾಗುತ್ತದೆ.

ಮುಂದಿನ ಸಂಚಿಕೆಗೆ...

# ಶ್ರೀ ಬೀರೇಶ್ವರ ಸೌಹಾರ್ದ ಸಹಕಾರಿ ಯಕ್ಸಂಬಾದಿಂದ ಶಿಕ್ಷಣ ನಿಧಿಗೆ ಚೆಕ್ ನೀಡಿಕೆ

ಶ್ರೀ ಬೀರೇಶ್ವರ ಸೌಹಾರ್ದ ಸಹಕಾರಿ ಯಕ್ಸಂಬಾ ತಾ.ಚಿಕ್ಕೋಡಿ ಜಿಲ್ಲಾ ಬೆಳಗಾವಿಯ ಸ್ಥಾಪಕ ಅಧ್ಯಕ್ಷ ಶ್ರೀ ಅಣ್ಣಾಸಾಹೇಬ ಜೊಲ್ಲೆ ಹಾಗೂ ಸಹಕಾರಿಯ ನಿರ್ದೇಶಕಿ ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ ಜೊಲ್ಲೆಯವರು ಸಹಕಾರಿಯು 2010–11 ಸಾಲಿನಲ್ಲಿ 1,79,17,958 ಲಾಭಗಳಿಸಿರುವುದಾಗಿ ತಿಳಿಸಿ ದಿನಾಂಕ 29/7/2011 ರಂದು ಬೆಂಗಳೂರಿನಲ್ಲಿ ನಡೆದ ತರಬೇತಿ ಕಾರ್ಯಾಗಾರದಲ್ಲಿ ಉಪಸ್ಥಿತರಿದ್ದ ಮಾಜಿ ಸಹಕಾರ ಮಂತ್ರಿ ಶ್ರೀ ಎಸ್.ಎಸ್.ಪಾಟೀಲ್‌ರವರ ಸಮ್ಮುಖದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರಿಗೆ ರೂ. 5,37,539 ಸಹಕಾರ ಶಿಕ್ಷಣ ನಿಧಿಯ ಚೆಕ್ಕುಗಳನ್ನು ನೀಡಿದರು.



# ಪಾಂಚರಾತ್ರ ಸೌಹಾರ್ದ ಸಹಕಾರಿಯ ಉದ್ಘಾಟನೆ



ದಿನಾಂಕ : 20/7/2011 ರಂದು ಬೆಂಗಳೂರು ನಗರದ ಟಿ.ದಾಸರಹಳ್ಳಿಯಲ್ಲಿ ಪಾಂಚರಾತ್ರ ಸೌಹಾರ್ದ ಪತ್ತಿನ ಸಹಕಾರಿಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಂದ್ರರವರು ಉದ್ಘಾಟಿಸಿ ಸಹಕಾರಿಯ ಸರ್ವತೋಮುಖ ಅಭಿವೃದ್ಧಿಗೆ ಶುಭಕೋರಿ ಸಹಕಾರಿಯಲ್ಲಿ ನಿರ್ವಹಿಸಬಹುದಾದ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರನೀಡಿ ರಾಜ್ಯದ ಅನೇಕ ಉತ್ತಮ ಸೌಹಾರ್ದ ಸಹಕಾರಿಗಳ ಕಾರ್ಯ ಚಟುವಟಿಕೆಗಳ ಮಾಹಿತಿ ನೀಡಿದರು. ವಿಷಯಗಳ ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಗೌರವ ಅಧ್ಯಕ್ಷ ಶ್ರೀ ಕೆ.ಶೇಷಾದ್ರಿಯವರು ವಹಿಸಿದ್ದರು. ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕಿ ಶ್ರೀಮತಿ ಹೆಚ್.ಸಿ. ನಾಗರತ್ನರವರು ಹಾಗೂ ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ. ಕುಮಾರರವರು ಹಾಗೂ ಶ್ರೀ ಗೋವಿಂದರಾಜ ಆರ್. ಅಧ್ಯಕ್ಷರು, ನರಸುಂಹನ್. ಕೆ ಉಪಾಧ್ಯಕ್ಷರು, ಸಹಕಾರಿಯ ನಿರ್ದೇಶಕರು ಗಳಾದ ಶ್ರೀ ಸುಧಾಕರನ್ ಶ್ರೀನಿವಾಸನ್, ಶ್ರೀ ನಾಗರಾಜು ಸಿ.ಜೆ., ಶ್ರೀ ಮಾಧವನ್ ಎನ್.ಶ್ರೀ ವೇಣುಗೋಪಾಲ್ ಎಮ್, ಶ್ರೀ ಶ್ರೀಧರ.ಆರ್, ಶ್ರೀ ನಾರಾಯಣಭಟ್ಟರ್ ಸಿ.ಎಸ್, ಶ್ರೀ ರಾಮಬಾಬು ಶ್ರೀಮತಿ ಲಕ್ಷ್ಮೀ ಶ್ರೀಮತಿ ಮೈಥಿಲಿ ವೈ.ಎಸ್. ಶ್ರೀ ರಾಜ.ಕೆ.ಎನ್. ಹಾಗೂ ಅನೇಕ ಸದಸ್ಯರು ಹಾಗೂ ಗಣ್ಯರು ಉಪಸ್ಥಿತರಿದ್ದರು.

# ಹೆಚ್.ಎಮ್.ಅಣ್ಣಪ್ಪ ನಿಧನ



ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿವೃತ್ತ ಅಧಿಕಾರಿ ಮಡಿಕೇರಿ, ಮೈಸೂರು, ಬೆಂಗಳೂರು ಹಾಗೂ ಶಿವಮೊಗ್ಗ ಸಹಕಾರ ತರಬೇತಿ ಕೇಂದ್ರಗಳಲ್ಲಿ ಅನೇಕ ವರ್ಷಗಳ ಕಾಲ ಪ್ರಾಂಶುಪಾಲರಾಗಿ ಸೇವೆಸಲ್ಲಿಸಿದ ಶ್ರೀ ಹೆಚ್.ಎಮ್.ಅಣ್ಣರವರು ದಿನಾಂಕ 24/7/2011 ರಂದು ತೀವ್ರ ಹೃದಯಾಘಾತದಿಂದ ಮಡಿಕೇರಿಯ ತಮ್ಮ ಮನೆಯಲ್ಲಿ ನಿಧನ ಹೊಂದಿದರು.

ಶ್ರೀಯುತರು ಸಹಕಾರ ಕಾಯ್ದೆ, ಸೌಹಾರ್ದ ಸಹಕಾರ ಕಾಯ್ದೆ ಮತ್ತು ಸಹಕಾರ ಕ್ಷೇತ್ರದ ಬಗ್ಗೆ ಅಪಾರ ಜ್ಞಾನವನ್ನು ಹೊಂದಿದ್ದರು. ಸಂಯುಕ್ತ ಸಹಕಾರಿಯ ಅನೇಕ ತರಬೇತಿ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಶ್ರೀಯುತರ ನಿಧನಕ್ಕೆ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರ,

ಶ್ರೀ ಗುರುನಾಥ ಜ್ಯಾಂತಿಕರ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಪಾಟೀಲ ಅಧಿಕಾರಿಗಳಾದ ಶ್ರೀ ನಾರಾಯಣ ಹೆಗಡೆ, ಶ್ರೀ ವೈ.ಕುಮಾರ, ಶ್ರೀ ವಿ.ಜೆ.ಕಾರಕೂನ, ಮುಂತಾದವರು ಶೋಕ ವ್ಯಕ್ತಪಡಿಸಿದ್ದಾರೆ.

ಶ್ರೀಯುತರ ನಿಧನದಿಂದ ಸಹಕಾರ ಕ್ಷೇತ್ರ ಒಬ್ಬ ಉತ್ತಮ ಸಂಪನ್ಮೂಲ ವ್ಯಕ್ತಿಯನ್ನು ಕಳೆದುಕೊಂಡಂತಾಗಿದೆ ಎಂದು ತಿಳಿಸಿದ್ದಾರೆ.



# ಸಹಕಾರಿ ಕ್ಷೇತ್ರಕ್ಕೆ ನೇರ ತೆರಿಗೆ ಸಂಹಿತೆಯ ಸಾದಕ-ಬಾದಕಗಳು

**ಎಚ್. ಶಿವಕುಮಾರ್**
ಚಾರ್ಟೆಡ್ ಅಕೌಂಟೆಂಟ್
shivakumar.h@icai.org

1961ರಲ್ಲಿ ಆದಾಯ ತೆರಿಗೆ ಕಾಯಿದೆಯ ನಮ್ಮ ದೇಶದಲ್ಲಿ ಅನುಷ್ಠಾನಗೊಂಡನಂತರ ಇಲ್ಲಿಯವರೆವಿಗೂ ಸಹಕಾರ ಕ್ಷೇತ್ರಕ್ಕೆ ಸಂಪೂರ್ಣ ತೆರಿಗೆ ದಿನಾಯಿತಿಯನ್ನು ಕೊಡುತ್ತಾ ಬಂದಿದೆ. ಸಣ್ಣ ಪುಟ್ಟ ತೆರಿಗೆ ವಿಧ ವಿಧಾನಗಳನ್ನು ಹೊರತು ಪಡಿಸಿ ಸಹಕಾರಿ ಕ್ಷೇತ್ರದ ಸಮಗ್ರ ಲಾಭ ಗಳಿಕೆಯು ಆದಾಯ ತೆರಿಗೆಯಿಂದ ಹೊರಗೆ ಉಳಿದು ಒಂದದ್ದಿದೆ. ತೆರಿಗೆ ಮೂಲಕ ಹಣವನ್ನು ಸಂಗ್ರಹಿಸಿ ನಂತರ ಸಾರ್ವಜನಿಕರಿಗೆ ವಿನಿಯೋಗವಾಗುವ ಪ್ರಕ್ರಿಯೆ ಆರಂಭವಾಗುವ ಮುಂಚೆಯೇ ಸಹಕಾರಿ ಕ್ಷೇತ್ರದ ಲಾಭ ಗಳಿಕೆಯ ಹಣ ಸಹಕಾರಿಗಳಲ್ಲಿ ಸಾರ್ವಜನಿಕವಾಗಿ ವಿನಿಯೋಗವಾಗಿ ಬಿಡುತ್ತದೆ ಎಂಬ ಆಶಯದಿಂದ ಸಹಕಾರಿ ಕ್ಷೇತ್ರಕ್ಕೆ ನೇರವಾಗಿ ತೆರಿಗೆ ವಿಧಿಸದೆ ಆದಾಯ ತೆರಿಗೆಯಿಂದ ವಿನಾಯಿಯಿ ಕೊಡುತ್ತಿದ್ದರ ಉದ್ದೇಶವಾಗಿತ್ತು. ಸರ್ಕಾರ ನೀಡಿದ ಆದಾಯ ತೆರಿಗೆ ವಿನಾಯಿತಿಯನ್ನು ಬಳಸಿಕೊಂಡು ತನ್ನ ಲಾಭ ಗಳಿಕೆಯನ್ನು ತನ್ನಲ್ಲೇ ಉಳಿಸಿಕೊಂಡು ಸಹಕಾರಿ ಕ್ಷೇತ್ರ ಬಲಾಢ್ಯವಾಗಿ ಬೆಳೆದು ಬಂದಿದ್ದು ಇತಿಹಾಸದ ಪುಟಗಳಲ್ಲಿ ಸೇರಿಹೋಗಿದೆ.

ಈಗ ಪ್ರಸ್ತುತ ಆದಾಯ ತೆರಿಗೆ ಕಾಯಿದೆಯ 80ಪಿ ಎಂಬ ಕಲಮಿನಲ್ಲಿ ನಮೂದಾಗಿರುವ ಸಹಕಾರಿ ಸಂಸ್ಥೆಗಳ ಆದಾಯ ತೆರಿಗೆ ವಿನಾಯಿತಿ ಪ್ರಕಾರ ಎಲ್ಲಾ ತರಹದ ಸಹಕಾರಿ ಸಂಘಗಳು ತಮ್ಮ ಬಹುತೇಕ ಆದಾಯದ ಮೇಲೆ ತೆರಿಗೆ ವಿನಾಯಿತಿ ಪಡೆಯುವ ಅವಕಾಶವಿದೆ. ಸಹಕಾರಿ ಬ್ಯಾಂಕುಗಳು ಮಾತ್ರ ತಮ್ಮ ಲಾಭಗಳಿಕೆಯ ಮೇಲೆ ಆದಾಯ ತೆರಿಗೆ ಕೊಡಬೇಕಿದೆ.

ಆತಂಕಕಾರಿ ವಿಷಯವೆಂದರೆ ಬರಲಿರುವ ಏಪ್ರಿಲ್ 2012 ರಿಂದ ಸಹಕಾರಿ ಸಂಘಗಳು, ಸೌಹಾರ್ದ ಸಹಕಾರಿಯೂ ಸೇರಿ, ಸಹಕಾರಿ ಕ್ಷೇತ್ರದ ಎಲ್ಲರೂ ಈ ತೆರಿಗೆ ವಿನಾಯಿತಿಯಿಂದ ವಂಚಿತರಾಗುತ್ತಿದ್ದಾರೆ. 1–4–2010ರಿಂದ ಬರಲು ಉತ್ಸಾಕಗೊಂಡಂತಿರುವ ನೇರ ತೆರಿಗೆ ಸಂಹಿತೆಯಲ್ಲಿ 80ಪಿ ತರಹದ ತೆರಿಗೆ ವಿನಾಯಿತಿಯನ್ನು ರದ್ದುಗೊಳಿಸಲಾಗಿದೆ. ಬದಲಾಗಿ ನೇರ ತೆರಿಗೆ ಸಂಹಿತೆಯಲ್ಲಿ ಕಲಂ 85ರ ಪ್ರಕಾರ ಕೃಷಿ ಸಂಭಂದಿತ ಚಟುವಟಿಕೆಯನ್ನು ನಡೆಸುವ ಸಹಕಾರಿ ಸಂಘಗಳನ್ನು ಹೊರತು ಪಡಿಸಿ ಎಲ್ಲ ಸಹಕಾರಿ ಸಂಸ್ಥೆಗಳೂ ತಮ್ಮ ಲಾಭಗಳಿಕೆಯ ಮೇಲೆ ಶೇ.33ರಷ್ಟು ತೆರಿಗೆ ಕಟ್ಟುತ್ತಿರುವ ಸಹಕಾರಿ ಬ್ಯಾಂಕುಗಳ ಮಾದರಿಯಲ್ಲೇ ಕೃಷಿಯೇತರ ಚಟುವಟಿಕೆಯನ್ನು ನಡೆಸುತ್ತಿರುವ ಎಲ್ಲಾ ಸಹಕಾರಿ ಸಂಘಗಳ ಆದಾಯ ತೆರಿಕೆಯ ವ್ಯಾಪ್ತಿಗೆ ಒಳಪಟ್ಟು ತೆರಿಗೆಯನ್ನು ತೆರಬೇಕಾಗುತ್ತದೆ.



ಕೇಂದ್ರ ಸರ್ಕಾರಕ್ಕೆ ಸಹಕಾರಿ ಕ್ಷೇತ್ರದ ಯಾವುದೇ ಬಗೆಯ ಆದಾಯವನ್ನು ನಿರ್ದಿಷ್ಟ ರೀತಿಯಲ್ಲಿ ಪರಿಗಣಿಸಿ ಸೂಕ್ತ ತೆರಿಗೆ ವಿನಾಯಿತಿ ನೀಡಲು ಅವಕಾಶವಿದ್ದು, ಅಂತಹ ಅವಕಾಶದಡಿಯಲ್ಲಿ ಅಧಿಸೂಚನೆಗಳನ್ನು ಹೊರಡಿಸಲು ನೇರ ತೆರಿಗೆ ಮಂಡಳಿಯು ಶಕ್ತಿವಾಗಿರುತ್ತದೆ. ಈ ಸದಾವಕಾಶವನ್ನು ಉಪಯೋಗಿಸಿಕೊಂಡು ದೇಶಾದ್ಯಂತ ಸಹಕಾರಿ ಸಮುದಾಯವು ತಮ್ಮ ತಮ್ಮ ಕ್ಷೇತ್ರದ ಸಂಸತ ಸದಸ್ಯರು ಮತ್ತು ರಾಜ್ಯ ಮಟ್ಟದ ಒಕ್ಕೂಟಗಳ ಮೂಲಕ ಕೇಂದ್ರ ಸರ್ಕಾರದ ಗಮನ ಸೆಳೆದು ಆದಾಯ ತೆರಿಗೆಯ ವಿನಾಯಿತಿಯನ್ನು ಮತ್ತೆ ಧಕ್ಕಿಸಿಕೊಳ್ಳಬೇಕಿದೆ.

ಏಪ್ರಿಲ್ 2012ರ ನಂತರ ಗಳಿಸುವ ಲಾಭಕ್ಕೆ ನೇರ ತೆರಿಗೆ ಸಂಹಿತೆಯು ಅನ್ವಯವಾಗುವುದರಿಂದ ಸಹಕಾರಿ ಕ್ಷೇತ್ರಕ್ಕೆ ಸಂಬಂಧಿಸಿದ ಜನ ಸಮುದಾಯ ಎಚ್ಚೆತ್ತುಕೊಂಡು ಸೂಕ್ತ ಪೂರ್ವ ಸಿದ್ಧತೆ ಮಾಡಿಕೊಂಡು ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ತೆರಿಗೆ ವಿನಾಯಿತಿಯನ್ನು ಮುಂದುವರೆಸಿಕೊಂಡು ಹೋಗಲು ಈಗಿನಿಂದಲೇ ಆಗ್ರಹಿಸಬೇಕಾಗಿದೆ. ನೇರ ತೆರಿಗೆ ಸಂಹಿತೆಯ ಆರನೇ ಶೇಡ್ಯೂಲಿನ 47ನೇ ಕ್ರಮಾಂಕದಲ್ಲಿ ಕೇಂದ್ರ ಸರ್ಕಾರಕ್ಕೆ ಸಹಕಾರಿ ಕ್ಷೇತ್ರದ ಯಾವುದೇ ಬಗೆಯ ಆದಾಯವನ್ನು ನಿರ್ದಿಷ್ಟ ರೀತಿಯಲ್ಲಿ ಪರಿಗಣಿಸಿ ಸೂಕ್ತ ತೆರಿಗೆ ವಿನಾಯಿತಿ ನೀಡಲು ಅವಕಾಶವಿದ್ದು, ಅಂತಹ ಅವಕಾಶದಡಿಯಲ್ಲಿ ಅಧಿಸೂಚನೆಗಳನ್ನು ಹೊರಡಿಸಲು ನೇರ ತೆರಿಗೆ ಮಂಡಳಿಯು ಶಕ್ತಿವಾಗಿರುತ್ತದೆ. ಈ ಸದಾವಕಾಶವನ್ನು ಉಪಯೋಗಿಸಿಕೊಂಡು ದೇಶಾದ್ಯಂತ ಸಹಕಾರಿ ಸಮುದಾಯವು ತಮ್ಮ ತಮ್ಮ ಕ್ಷೇತ್ರದ ಸಂಸತ ಸದಸ್ಯರು ಮತ್ತು ರಾಜ್ಯ ಮಟ್ಟದ ಒಕ್ಕೂಟಗಳ ಮೂಲಕ ಕೇಂದ್ರ ಸರ್ಕಾರದ ಗಮನ ಸೆಳೆದು ಆದಾಯ ತೆರಿಗೆಯ ವಿನಾಯಿತಿಯನ್ನು ಮತ್ತೆ ಧಕ್ಕಿಸಿಕೊಳ್ಳಬೇಕಿದೆ.

ಇಲ್ಲದಲ್ಲಿ ಕೃಷಿಯೇತರ ಸಹಕಾರ ಸಂಘಗಳ ಆದಾಯದ ಮೇಲೆ ಶೇ 33 ರಷ್ಟು ತೆರಿಗೆ ಕಟ್ಟುವ ಮತ್ತು ಆ ಪರಹ ಕಟ್ಟಿದ ತೆರಿಗೆಯನ್ನು ತೆರಿಗೆ ಇಲಾಖೆಯ ಅಧಿಕಾರಿಗಳ ಎದುರು ಸಮರ್ಥಿಸಿಕೊಳ್ಳುವ ಅನವಶ್ಯ ಹೊಣೆಗಾರಿಕೆ ಹೊರಬೇಕಾಗಿರುತ್ತದೆ. ಅಂತಹ ಪರಿಸ್ಥಿತಿ ನಿರ್ಮಾಣವಾಗುವ ಮೊದಲು ಆದಾಯ ತೆರಿಗೆಯು ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಪ್ರಮುಖವಾಗಿ, ಒಟ್ಟಾರೆ ಸಹಕಾರಿ ಚಳುವಳಿಗೆ ಸಾರ್ವತ್ರಿಕವಾಗಿ ಅನ್ವಯವಾಗುವಂತೆ ನೇರ ತೆರಿಗೆ ಸಂಹಿತೆಯಲ್ಲಿ ಮಾರ್ಪಾಡು ಮಾಡಲು ಹಕ್ಕೊತ್ತಾಯವನ್ನು ತರಬೇಕಿದೆ. ಉಳಿಸಿದ ಹಣ ಗಳಿಸಿದ ಹಣಕ್ಕಿಂತ ಅಮೂಲ್ಯವಾದದ್ದು ಎಂಬ ಹಿರಿಯರ ಅನುಭವೋಕ್ತಿಯಂತೆ ಸಹಕಾರಿ ಸಂಘಗಳು ತೆರಿಗೆ ವಿನಾಯಿತಿಯ ಮೂಲಕ ಉಳಿಸಿದ ಹಲವು ಲಾಭದ ಮೂಲಕ ಗಳಿಸಿದ ಹಣಕ್ಕಿಂತ ಅಮೂಲ್ಯವಾಗಿರುತ್ತದೆ. ಅಂತಹ ಅಮೂಲ್ಯತೆಯನ್ನು ಕಾನೂನು ಬದ್ಧವಾಗಿ ತಮ್ಮದಾಗಿಸಿಕೊಳ್ಳಲು ಸಹಕಾರಿಗಳು ಸರ್ಕಾರದೊಡನೆ ಸಂಘರ್ಷ .. ಸಮಯ ಸನ್ನಿಹಿತವಾಗದೆ. ■

# ಸೌಹಾರ್ದ ಸಹಕಾರಿಗಳ ಆಡಳಿತ ಪಾರದರ್ಶಕವಾಗಿರಲಿ – ಹೆಚ್.ಕೆ.ಪಾಟೀಲ್



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ದಿನಾಂಕ 29/7/2011 ರಂದು ರಾಜ್ಯದ ಮೈಸೂರು ಹಾಗೂ ಬೆಳಗಾವಿ ವಿಭಾಗಗಳಲ್ಲಿ ಹೊಸದಾಗಿ ನೊಂದಣೆಯಾಗಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗಾಗಿ "ಪ್ರವೇಶ ತರಬೇತಿ ಹಾಗೂ ಗುಣಮಟ್ಟ ನಿರ್ವಹಣೆ ತರಬೇತಿ ಕಾರ್ಯಕ್ರಮವನ್ನು ಮಾಜಿ ಸಚಿವ, ಹಿರಿಯ ಸಹಕಾರಿ ಹಾಗೂ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷ ಶ್ರೀ ಹೆಚ್.ಕೆ.ಪಾಟೀಲ್ ರವರು ದೀಪ ಬೆಳಗಿಸಿ ಉದ್ಘಾಟಿಸಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಬೆಳವಣಿಗೆ ಹಾಗೂ ಕಾರ್ಯಚಟುವಟಿಕೆಗಳು ತೃಪ್ತಿದಾಯಕವಾಗಿದೆ ಎಂದರು.

ಸಹಕಾರಿ ಸಂಘಗಳು ಉತ್ತಮ ಆರ್ಥಿಕ ಸಂಘಟನೆಗಳಾಗಿ ಸಹಕಾರಿ ಕ್ಷೇತ್ರಕ್ಕೆ ಬಲಬಂದಂತಾಗಿದೆ. ಸೌಹಾರ್ದ ಸಹಕಾರಿ ಕ್ಷೇತ್ರ ಹಾಗೂ ಬೇರೆ ಸಹಕಾರಿ ಕ್ಷೇತ್ರ ಎಂದು ಎರಡು ಕ್ಷೇತ್ರವಿಲ್ಲ ಸಹಕಾರಿಗಳೆಲ್ಲ ಒಂದೇ ಎಂದು ತಿಳಿಸಿ ಸಹಕಾರಿ ಕ್ಷೇತ್ರದ ಆಡಳಿತದಲ್ಲಿ ಪಾರದರ್ಶಕತೆಯನ್ನು ಅಳವಡಿಸಿಕೊಳ್ಳುವುದು ಅಗತ್ಯ ಎಂದು ತಿಳಿಸಿದರು. ಸಹಕಾರಿ ಕ್ಷೇತ್ರ ಶ್ರೀ ಸಾಮಾನ್ಯನ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದೇ ಮುಖ್ಯ ಧ್ಯೇಯವಾಗಿರುವುದರಿಂದ ಹಣಕಾಸಿನ ನಿರ್ವಹಣೆಯ ಮಹತ್ವದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಇದನ್ನು ಸಮರ್ಥವಾಗಿ ನಿರ್ವಹಿಸಿದಲ್ಲಿ ಸಾರ್ವಜನಿಕರ ಗಮನ ಸೆಳೆಯಲು ಸಾಧ್ಯವಾಗುತ್ತದೆ.

ಯಾವುದೇ ಆರ್ಥಿಕ ಸಂಘಟನೆಗಳು ಸಹಕಾರಿ ಕ್ಷೇತ್ರದಷ್ಟು ಸುಲಭವಾಗಿ ಸಾಮಾನ್ಯ ಜನರಿಗೆ ಆರ್ಥಿಕ ನೆರವನ್ನು ಹಾಗೂ ಸೌಲಭ್ಯವನ್ನು ನೀಡುವುದಿಲ್ಲ. ಈ ಕೆಲಸವನ್ನು ಸಹಕಾರಿ ಸಂಸ್ಥೆಗಳು ನಿರ್ವಹಿಸುತ್ತಿವೆ. ಸಹಕಾರಿ ಸಂಸ್ಥೆಗಳ ಸಂಖ್ಯೆ, ಸದಸ್ಯರ ಸಂಖ್ಯೆ, ಠೇವಣಿಗಳ ಮೊತ್ತ ಸಾಲದ ಮೊತ್ತ, ದುಡಿಯುವ ಬಂಡವಾಳ ಹಾಗೂ ಲಾಭಾಂಶಗಳು ಪ್ರಶಂಸನೀಯವಾಗಿವೆ. ಈ ಕ್ಷೇತ್ರಕ್ಕೆ ಹೆಚ್ಚಿನ ಗಮನವನ್ನು ನೀಡುವುದು ಅಗತ್ಯವಾಗಿದೆ ದೇಶದ ಅರ್ಥವ್ಯವಸ್ಥೆಯಲ್ಲಿ ಸಹಕಾರಿ ಕ್ಷೇತ್ರದ ಪಾಲು ಗಣನೀಯವಾಗಿದ್ದರೂ ಈ ದೇಶದ ಯೋಜನಾವ್ಯವಸ್ಥೆಯಲ್ಲಿ, ರಿಸರ್ವ್ ಬ್ಯಾಂಕಿನವರ ದೃಷ್ಟಿಯಲ್ಲಿ ಅಥವಾ ಕೇಂದ್ರ ಸರಕಾರವಾಗಲಿ ಈ ಕ್ರೆಡಿಟ್ ಸಹಕಾರ ಸಂಘಗಳಿಗೆ ಮಹತ್ವವನ್ನೆ ನೀಡದಿರುವುದು ವಿಷಾದನೀಯ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್ಆರ್. ಸತೀಶಚಂದ್ರರವರು ಸೌಹಾರ್ದ ಸಹಕಾರಿ ಚಳುವಳಿ ಕಳೆದ ಒಂದು ದಶಕದಲ್ಲಿ ಸಹಕಾರಿ ಕ್ಷೇತ್ರದ ಗುಣಮಟ್ಟ ಸುಧಾರಣೆಗೆ ನಾಂದಿಹಾಡಿದೆ. ಅನೇಕ ಸಹಕಾರಿಗಳು ರಾಜ್ಯದ ಮಾದರಿ ಸಹಕಾರಿಸಂಸ್ಥೆಗಳಾಗಿ ಕಾರ್ಯ ನಿರ್ವಹಿಸಿ ರಾಜ್ಯಸರಕಾರದ ಹಾಗೂ ಸಾರ್ವಜನಿಕರ ಗಮನಸೆಳೆಯುವಲ್ಲಿ ಯಶಸ್ವಿಯಾಗಿರುವುದು ನಮಗೆಲ್ಲ ಹೆಮ್ಮೆಯ ವಿಷಯ ಎಂದು ತಿಳಿಸಿ ಈ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಾರಂಭಿಸುವುದಕ್ಕೆ ಬೆಳವಣಿಗೆಗೆ ಪ್ರೋತ್ಸಾಹ ನೀಡಿದ ಹೆಚ್.ಕೆ.ಪಾಟೀಲ್ರವರೂ ಸೇರಿದಂತೆ ಅನೇಕ ಗಣ್ಯರನ್ನು ಸ್ಮರಿಸಿ ಅಭಿನಂದಿಸಿದರು.

ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿಯವರು ಸಹಕಾರಿಗಳು ಶಾಖೆಗಳನ್ನು ತೆರೆಯುವುದು ಸೇರಿದಂತೆ ಅನೇಕ ವಿಷಯಗಳ ಬಗ್ಗೆ ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸಂಯುಕ್ತ ಸಹಕಾರಿಯ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಕಿವಿಮಾತು ಹೇಳಿದರು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ.ಪಾಟೀಲ್ರವರು ಸ್ವಾಗತ ಹಾಗೂ ಪ್ರಾಸ್ತಾವಿಕ ಭಾಷಣ ಮಾಡಿದರು. ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ.ಕುಮಾರವರು ವಂದನೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಅಪರ ನಿಬಂಧಕ ಶ್ರೀ ಸಿ.ಎನ್.ಪರಶಿವಮೂರ್ತಿ, ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಹಾಗೂ ಸಹಕಾರ ಇಲಾಖೆಯ ಜಂಟಿನಿಬಂಧಕ ಶ್ರೀ ಬಿ.ಎ.ಮಹದೇವಪ್ಪನವರು ವಿವಿಧ ವಿಷಯಗಳಬಗ್ಗೆ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ 44 ಸೌಹಾರ್ದ ಸಹಕಾರಿಗಳ 83 ಪ್ರತಿನಿಧಿಗಳು ಹಾಗೂ ಗಣ್ಯರು ಭಾಗವಹಿಸಿದ್ದರು.

# ಸೌಹಾರ್ದ ಸಹಕಾರಿಗಳ ಸ್ವಾಯತ್ತತೆ ಕಡಿತಗೊಳಿಸುವ ಪ್ರಯತ್ನ ಬೇಡ – ಎಸ್.ಎಸ್.ಪಾಟೀಲ್



ಎರಡನೇ ದಿನದ ಕಾರ್ಯಕ್ರಮವನ್ನು ಬೆಂಗಳೂರು ಹಾಗೂ ಗುಲ್ಬರ್ಗಾ ವಿಭಾಗದಲ್ಲಿ ನೂತನವಾಗಿ ನೊಂದಣೆಯಾಗಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳಿಗಾಗಿ ಏರ್ಪಡಿಸಲಾಗಿತ್ತು. ಈಕಾರ್ಯಕ್ರಮವನ್ನು ಮಾಜಿ ಸಹಕಾರ ಸಚಿವರಾದ ಹಾಗೂ ಅವರ ಅಧಿಕಾರಾವಧಿಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯನ್ನು ಜಾರಿಗೊಳಿಸಿದ ಶ್ರೀ ಎಸ್.ಎಸ್.ಪಾಟೀಲ್ ರವರು ಉದ್ಘಾಟಿಸಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿ ಸಾಧಿಸಿದ ಪ್ರಗತಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಇದು ಇನ್ನೂ ಬೆಳೆಯಬೇಕು. ಮಾದರಿ ಸಹಕಾರಿ ಸಂಸ್ಥೆಗಳಾಗಿ ಈ ಸೌಹಾರ್ದ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸಬೇಕು ಎಂದು ಆಶಿಸುವುದಾಗಿ ತಿಳಿಸಿದರು. ಈ ಕಾಯ್ದೆಯನ್ನು ಜಾರಿಗೆ ತರುವಲ್ಲಿ ಅವರು ಎದುರಿಸಿದ ಅನೇಕ ಕಷ್ಟದ ವಿಷಯಗಳ ಬಗ್ಗೆ ಎಳೆ ಎಳೆಯಾಗಿ ಬಿಡಿಸಿ ಮಾತನಾಡುತ್ತ ಸಹಕಾರಿ ಇಲಾಖೆ ಸಹಕಾರಿಗಳ ತಪ್ಪು ಕಂಡುಹಿಡಿದು ಶಿಕ್ಷಿಸುಸುವುದೊಂದೆ ಅಲ್ಲ ಅವುಗಳು ಸರಿಯಾಗಿ ಕಾರ್ಯನಿರ್ವಹಿಸುವಂತೆ ಕ್ರಮವಿಡಬೇಕಾಗುತ್ತದೆ.ಈ ನಿಟ್ಟಿನಲ್ಲಿ ಸಹಕಾರಿ ಇಲಾಖೆ ಕಾರ್ಯನಿರ್ವಹಿಸಬೇಕು. ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಅನೇಕ ತಿದ್ದುಪಡಿಗಳ ಅವಶ್ಯಕತೆಯಿದೆ. ಈ ತಿದ್ದುಪಡಿಗಳು ಬೇಗ ಆಗಬೇಕು. ಆದರೆ ಸೌಹಾರ್ದ ಸಹಕಾರಿಗಳ ಆಶಯಕ್ಕೆ ಕಾಯ್ದೆಯ ಆಶಯಕ್ಕೆ ಸಹಕಾರಿಗಳ ಸ್ವಾಯತ್ತತೆಗೆ ಧಕ್ಕೆ ತರುವಂತಾಗಬಾರದು ಎಂದು ತಿಳಿಸಿದರು.

ರಾಜ್ಯದಲ್ಲಿ 1750 ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು, 225 ಕೋಟಿಗೂ ಹೆಚ್ಚು ಬಂಡವಾಳ,3750 ಕೋಟಿ ಠೇವಣಿಗಳು, 2750 ಕೋಟಿರೂಗಳ ಸಾಲ ನೀಡಿರುವುದು 4000 ಕೋಟಿ ರೂಗಳ ದುಡಿಯುವ ಬಂಡವಾಳ 391 ಈ–ಸ್ಟಾಂಪಿಂಗ್ ಕೇಂದ್ರಗಳ ಕಾರ್ಯಾಚರಣೆ ಇರುವುದು ಒಳೆಯ ಸಾಧನೆ ಎಂದು ತಿಳಿಸಿ ತಮ್ಮ ಮೆಚ್ಚುಗೆ ವ್ಯಕ್ತ ಪಡಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ಶ್ರೀ ಎಸ್.ಎಸ್.ಪಾಟೀಲ್ ರವರಂಥ ದೂದೃಷ್ಟಿಯ ಸಹಕಾರಿಗಳು ಸಹಕಾರಿ ಸಚಿವರಾಗಿದ್ದುದರಿಂದಲೇ ಈ ಕಾಯ್ದೆ ಜಾರಿಯಾಗಲು ಸಾಧ್ಯವಾಯಿತು ಎಂದು ತಿಳಿಸಿ ರಾಜ್ಯದಲ್ಲಿ ಈ ವರ್ಷದ ಕೊನೆಯಲ್ಲಿ ಸೌಹಾರ್ದ ಸಹಕಾರಿಗಳ ಸಂಖ್ಯೆಯನ್ನು 2000ಕ್ಕೆ ತಲುಪಿಸುವ ಗುರಿಯಿದೆ ಎಂದು ತಿಳಿಸಿ ಎಲ್ಲ ಸೌಹಾದ್ ಸಹಕಾರಿಗಳು ಈ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿಯೊಂದಿಗೆ ಕೈಗೂಡಿಸಲು ಕರೆನೀಡಿದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೆಶಕ ಶ್ರೀ ಶರಣಗೌಡ.ಪಾಟೀಲ್ ಸ್ವಾಗತಿಸಿದರು. ನಿವೃತ್ತ ಅಪರ ನಿಬಂಧಕ ಶ್ರೀ ಸಿ.ಎನ್.ಪರಶಿವಮೂರ್ತಿಯವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ವೈ.ಕುಮಾರರವರು ವಂದನೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಅಪರ ನಿಬಂಧಕ ಶ್ರೀ ಸಿ.ಎನ್.ಪರಶಿವಮೂರ್ತಿ, ಸಂಯುಕ್ತ ಸಹಕಾರಿಯ ನಿರ್ದೆಶಕ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಹಾಗೂ ಸಹಕಾರ ಇಲಾಖೆಯ ಜಂಟಿನಿಬಂಧಕ ಶ್ರೀ ಬಿ.ಎ.ಮಹದೇವಪ್ಪನವರು ವಿವಿಧ ವಿಷಯಗಳಬಗ್ಗೆ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ 46 ಸೌಹಾರ್ದ ಸಹಕಾರಿಗಳ 91 ಪ್ರತಿನಿಧಿಗಳು ಹಾಗೂ ಗಣ್ಯರು ಭಾಗವಹಿಸಿದ್ದರು. ಕಾರ್ಯಕ್ರಮ ಬಹಳ ಪ್ರಯೋಜನಕಾರಿಯಾಗಿತ್ತೆಂದು ಪ್ರತಿನಿಧಿಗಳು ಅಭಿಪ್ರಾಯ ಸೂಚಿಸಿದರು.